ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೪ ಏಪ್ರಿಲ್ ೨. ೧೯೮೯ ರೂ. ೧-೦೦

ಕಾಂಗ್ರೆಸ್(ಐ) ಆಳುವ ಸಾಮರ್ಥ್ಯ ಕಳೆಕೊಳ್ಳುತ್ತಿದೆ.

ಪಾಲಿಟ್‌ಬ್ಯೂರೋ ಹೇಳಿಕೆ

ಕಾಂಗ್ರೆಸ್(ಐ) ಪಕ್ಷದೊಳಗಿನ ಬಿಕ್ಕಟ್ಟು ತೀವ್ರವಾಗಿ ಮುಂದುವರಿಯುತ್ತಿದೆ. ಬಿಹಾರ್ ಘಟನೆಗಳ ನಂತರ ಇತ್ತೀಚೆಗೆ ರಾಜಸ್ಥಾನ ಮತ್ತು ಗುಜರಾತ್‌ನಲ್ಲಿನ ಬೆಳವಣಿಗೆಗಳು ಹೇಗೆ ನೀತಿ ಹೀನ ಗುಂಪು ತಿಕ್ಕಾಟಗಳು ಮತ್ತು ಅಧಿಕಾರ ದಾಹ ಕಾಂಗ್ರೆಸ್(ಐ) ರಾಜ್ಯ ಸರ್ಕಾರಗಳನ್ನು ಅಸ್ತವ್ಯಸ್ತಗೊಳಿಸಿ ಒಂದಾದಮೇಲೊಂದಂತೆ ಮಂತ್ರಿ ಮಂಡಳಿಯ ಬಿಕ್ಕಟ್ಟು ಸೃಷ್ಟಿಸುತ್ತಿವೆ ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಆಳುವ ಪಕ್ಷ ದೇಶವನ್ನು ಆಳುವ ಮತ್ತು ಜನತೆಯ ಸೇವೆಗಾಗಿ, ಒಂದು ಕನಿಷ್ಠ ಆಡಳಿತ ಚೌಕಟ್ಟನ್ನು ನಿರ್ಮಿಸುವ ಸಾಮರ್ಥ್ಯವನ್ನು ಬಹಳ ಶೀಘ್ರವಾಗಿ ಕಳೆಕೊಳ್ಳುತ್ತಿದೆ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹೇಳಿದೆ.

ಪಾಲಿಟ್‌ಬ್ಯೂರೋ ಎರಡು ದಿನ ನವದೆಹಲಿಯಲ್ಲಿ ಸಭೆ ಸೇರಿ ದೇಶದ ಹಾಗೂ ವಿಶ್ವದ ಬೆಳವಣಿಗೆಗಳನ್ನು ಪರಾಮರ್ಶಿಸಿ ಮಾರ್ಚ್ 19ರಂದು ಈ ಹೇಳಿಕೆ ನೀಡಿತು.

ಹೇಳಿಕೆಯ ಆರಂಭದಲ್ಲಿ ಲೋಕದಳ (ಬಿ)ದ ಅಧ್ಯಕ್ಷ ಶ್ರೀಯುತ ಹೆಚ್.ಎನ್. ಬಹುಗುಣರವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ತಮ್ಮ ರಾಜಕೀಯ ಜೀವನದಾದ್ಯಂತ ಸಾಮ್ರಾಜ್ಯಶಾಹಿ-ವಿರೋಧಿ ಮೌಲ್ಯ ಗಳನ್ನು ಜಾತ್ಯಾತೀತತೆಯನ್ನು ಎತ್ತಿಹಿಡಿದ ಅವರು ಈ ಘಟ್ಟದಲ್ಲಿ ನಿಧನರಾದದ್ದು ದೇಶದ ಪ್ರಜಾಪ್ರಭುತ್ವ ವಾದಿ ಮತ್ತು ಜಾತ್ಯಾತೀತ ಶಕ್ತಿಗಳಿಗೊಂದು ದೊಡ್ಡ ನಷ್ಟ ಎಂದು ಪಾಲಿಟ್‌ಬ್ಯೂರೋ ತನ್ನ ದುಃಖ ವ್ಯಕ್ತಪಡಿಸುತ್ತದೆ.

ಸರ್ವಾಧಿಕಾರೀ ಕ್ರಮ

ಠಕ್ಕರ್ ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆಂಬ ಎಂ.ಪಿ.ಗಳ, ಪತ್ರಿಕೆಗಳ, ಸಾರ್ವಜನಿಕ ಒತ್ತಾಯವನ್ನು ತಳ್ಳಿಹಾಕಿ ಪ್ರಧಾನಮಂತ್ರಿ ಮತ್ತು ಕಾಂಗ್ರೆಸ್(ಐ) ಸರ್ಕಾರ ಕೈಗೊಂಡ 63 ಎಂ.ಪಿ.ಗಳನ್ನು ಅಮಾನತು ಮಾಡುವ ಸರ್ವಾಧಿಕಾರೀ ಕ್ರಮವನ್ನು ಪಾಲಿಟ್‌ಬ್ಯೂರೋ ಖಂಡಿಸಿದೆ. ಇದು ಸಂಸದೀಯ ಪ್ರಜಾಪ್ರಭುತ್ವದ ಎಲ್ಲಾ ಪರಂಪರೆಗಳಿಗೂ ವಿರುದ್ಧವಾದುದು ಎಂದು ಹೇಳಿಕೆ ತಿಳಿಸಿದೆ. ಕೊನೆಗೂ ಸರ್ಕಾರ ತನ್ನ ನಿಲುವು ಬದಲಿಸಬೇಕಾಗಿ ಬಂದುದು ವಿರೋಧ ಪಕ್ಷಗಳು ಪತ್ರಿಕೆಗಳು ಮತ್ತು ಸಾರ್ವಜನಿಕ ಅಭಿಪ್ರಾಯದ ಐಕ್ಯ ಹೋರಾಟಕ್ಕೆ ದೊರೆತ ಜಯ. ಕೇಂದ್ರ ಮಂತ್ರಿ ಮಂಡಲದ ಇತರ ಯಾವುದೇ ಮಂತ್ರಿಗೆ ವರದಿಯನ್ನು ತೋರಿಸದಿರುವುದರ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಪಾಲಿಟ್‌ಬ್ಯೂರೋ ಇದು ಮಂತ್ರಿಮಂಡಲ ವ್ಯವಸ್ಥೆ ಕುಸಿದಿರುವುದನ್ನು ತೋರಿಸುತ್ತದೆ ಎಂದಿದೆ.

ಪಂಜಾಬ್ ಪರಿಸ್ಥಿತಿ

ಬಹಳಷ್ಟು ಮೀನ-ಮೇಷ ಎಣಿಸಿದ ನಂತರ ಪಂಜಾಬ್ ಬಗ್ಗೆ ಸರ್ಕಾರದ ಪ್ಯಾಕೇಜ್ ಹೇಳಿಕೆ ಕೆಲವು ರಿಯಾಯಿತಿ ನೀಡಿದ್ದರೂ ಪರಿಸ್ಥಿತಿ ಎದುರಿಸುವಲ್ಲಿ ಇದು ಸಾಲುವುದಿಲ್ಲ. ಸರ್ಕಾರ ಇನ್ನೂ ಕೂಡಾ ಪಂಜಾಬಿನಲ್ಲಿ ಭಯೋತ್ಪಾದಕರ ಬೆದರಿಕೆಯನ್ನು ಗಂಭೀರವಾಗಿ ಕಾಣುತ್ತಿಲ್ಲ. ಈಗ ಬೇಕಾಗಿರುವುದು ಆಡಳಿತಾತ್ಮಕ, ಪೋಲೀಸ್ ಕ್ರಮಗಳಲ್ಲ. ಒಂದು ಸಮಗ್ರ ರಾಜಕೀಯ ಪರಿಹಾರ. ಆದರೆ ಸಮಸ್ಯೆಯನ್ನು ಪ್ರಜಾಸತ್ತಾತ್ಮಕವಾಗಿ ಎದುರಿಸುವ ರಾಜಕೀಯ ಇಚ್ಛಾಶಕ್ತಿ

▶ ಪುಟ 8



ಕಾರ್ಖಾನೆಗಳ ಮುಚ್ಚುವಿಕೆಯನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಸಹಸ್ರಾರು ಕಾರ್ಮಿಕರ ಬಂಧನ

ಮುಚ್ಚಿರುವ ಕಾರ್ಖಾನೆಗಳಲ್ಲಿ ಕೂಡಲೇ ತೆಗೆಯಬೇಕು, ಕಾರ್ಖಾನೆಗಳನ್ನು ಮುಚ್ಚಿರುವ ಮಾಲೀಕರನ್ನು ಜೈಲಿಗೆ ಹಾಕಿ, ರೋಗಗ್ರಸ್ಥ ಕಾರ್ಖಾನೆಗಳನ್ನು ಸರ್ಕಾರವೇ ವಹಿಸಿಕೊಳ್ಳಲಿ, ರಾಜೀವ್ ಸರ್ಕಾರದ ಹೊಸ ಆರ್ಥಿಕ ನೀತಿಗೆ ಧಿಕ್ಕಾರ; ಹೊಸ ಜವಳಿ ನೀತಿಗೆ ಧಿಕ್ಕಾರ, ಜನತಾದಳ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ, ಕಾರ್ಮಿಕರೇ ಒಂದಾಗಿ-ಹೋರಾಟಕ್ಕೆ ಮುಂದಾಗಿ ಮುಂತಾಗಿ ಘೋಷಣೆಗಳನ್ನು ಕೂಗುತ್ತಾ ಸುಮಾರು ಎರಡು ಸಹಸ್ರ ಕಾರ್ಮಿಕರು ಮೈಸೂರು ಬ್ಯಾಂಕ್ ಚೌಕದಿಂದ ವಿಧಾನಸೌಧದತ್ತ ಧಾವಿಸಿದರು. ಹುಬ್ಬಳ್ಳಿಯಲ್ಲಿ ಜರುಗಿದ ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನವು ಕಾರ್ಖಾನೆಗಳ ಮುಚ್ಚುವಿಕೆಯ ವಿರುದ್ಧ ರಾಜ್ಯದಾದ್ಯಂತ ಚಳುವಳಿ ಹೂಡಲು ನೀಡಿದ್ದ ಕರೆಯ ಮೇರೆಗೆ ಮಾರ್ಚ್ 27ರಂದು ಬೆಂಗಳೂರಿನಲ್ಲಿ ವಿಧಾನಸೌಧದ ಪಿಕೆಟಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನೂರಾರು ಮಹಿಳೆಯರೂ ಪಾಲ್ಗೊಂಡಿದ್ದ ಮೆರವಣಿಗೆಯಲ್ಲಿ ಬಳ್ಳಾರಿಯ ಸರೋಜ್ ಅಲಾಯ್ಸ್ ಕಾರ್ಖಾನೆಯ ಕಾರ್ಮಿಕರೂ ಸಹ ಸೇರಿಕೊಂಡು ತೆಲುಗು ಹಿಂದಿ ಯಲ್ಲಿ ಘೋಷಣೆಗಳು ಮೊಳಗಿದುವು.

ಮೆರವಣಿಗೆಯು ಕೆ.ಆರ್.ವೃತ್ತವನ್ನು ಸಮೀಪಿಸುತ್ತಿದ್ದಂತೆ ಕಾರ್ಮಿಕರು ವಿಧಾನಸೌಧ ವೃತ್ತದತ್ತ ನುಗ್ಗಲು ಯತ್ನಿಸಿದಾಗ ಪೋಲೀಸರು ತಡೆದು ಬಂಧಿಸಲಾರಂಭಿಸಿದರು. ಸುಡುಬಿಸಿಲಿನಲ್ಲೂ ಡಾಂಬರ್ ರಸ್ತೆಯ ಮೇಲೆ ಎರಡು ಗಂಟೆಗಳಿಗೂ ಹೆಚ್ಚು ಕಾಲ ಕುಳಿತು ಕಾರ್ಮಿಕರು ಸಂಚಾರವನ್ನು ಸ್ತಬ್ಧಗೊಳಿಸಿದರು. ನೆರೆದಿದ್ದ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಸಿ.ಐ.ಟಿ.ಯು. ಅ.ಭಾ. ಉಪಾಧ್ಯಕ್ಷರು ಹಾಗೂ ರಾಜ್ಯ ಘಟಕದ

▶ ಪುಟ 8

ವಿಧಾನಸೌಧದ ಕದತಟ್ಟಿದ ಯುವಜನರ ಸ್ವರಗಳು



ಮಧ್ಯಾಹ್ನದ ಸುಡು ಬಿಸಿಲು ಚಪ್ಪಲಿ ಇಲ್ಲದ ಪಾದಗಳು- ಮುಗಿಲು ಮುಟ್ಟುವ ಘೋಷಣೆಗಳು- ದೃಢ ನಿರ್ಧಾರದೊಂದಿಗೆ ರಾಜ್ಯದ ರಾಜಧಾನಿಯ ಪ್ರಮುಖ ಬೀದಿಗಳಲ್ಲಿ ವಿಧಾನಸೌಧದತ್ತ ಸಾಗಿದವು. ಡಿ.ವೈ.ಎಫ್.ಐ. ರಾಜ್ಯ ಸಮಿತಿಯು "ನಿರುದ್ಯೋಗ ವಿರೋಧಿ ದಿನಾಚರಣೆಯ' ಅಂಗವಾಗಿ ಕರೆ ನೀಡಿದ್ದ ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲೆಡೆಗಳಿಂದ ರೈಲು, ಬಸ್ಸು, ಲಾರಿ, ಇತರೇ ವಾಹನಗಳ ನೆರವಿನಿಂದ ಆಗಮಿಸಿದ ಸಾವಿರಾರು ಯುವಜನರ ಉದ್ಯೋಗ ಸಂಬಂಧಿಸಿದ 12 ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ಚಿಕ್ಕಲಾಲ್ ಬಾಗ್‌ನಿಂದ ಹೊರಟು ಕಬ್ಬನ್‌ಪಾರ್ಕ್ ವರೆಗೆ ಮೆರವಣಿಗೆ ನಡೆಸಿ ಸಭೆ ನಡೆಸಿದರು.

ಜನರ ಆಶಯಕ್ಕೆ ಬೆಲೆ ನೀಡಿ

ಡಿ.ವೈ.ಎಫ್.ಐ. ರ್‍ಯಾಲಿಗೆ ಸಾಂದರ್ಭಿಕವಾಗಿ ಒದಗಿದ ಮುಖ್ಯ ಅತಿಥಿ ಎಸ್.ಎಫ್.ಐ. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾ॥ ನಿಲೋತ್ಪಲ ಬಸು ರವರು ದೇಶಾದ್ಯಂತ ನಡೆಯುತ್ತಿರುವ ಯುವಜನತೆ ಪ್ರಜಾಸತ್ತಾತ್ಮಕ ಪ್ರತಿಭಟನಾ ಅಲೆಗಳೊಂದಿಗೆ ರಾಜ್ಯದ ಯುವಜನರೂ ಸೇರ್ಪಡೆಗೊಳ್ಳುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. "ಯುವಪ್ರಧಾನಿ" ಹಣೆಪಟ್ಟಿ ಹೊತ್ತು ರಾಷ್ಟ್ರಾದಳಿತದ ಚುಕ್ಕಾಣಿಯನ್ನು ಹಿಡಿದ ರಾಜೀವ್‌ಗಾಂಧಿಯವರ ನಾಲ್ಕುವರೆ ವರ್ಷಗಳ ಆಡಳಿತ ಅನುಭವಿಸಿರುವ ಹೋರಾಟದ ಯುವಜನತೆಯ ಪಟ್ಟಿಯನ್ನು ನೀಡಿದರು. ಜನರಿಂದ ಬಹುದೂರದಲ್ಲಿರುವ ರಾಜೀವ್ ಗಾಂಧಿ ಭಾರೀದೊಡ್ಡ ಬುಲೆಟ್‌ಪ್ರೂಫ್ ಮಹಾ ಗೋಡೆಯನ್ನೇ ತನ್ನ ಸುತ್ತ ನಿರ್ಮಿಸಿಕೊಂಡಿ

▶ ಪುಟ 8

ಮುಂದಿನ ಸಂಚಿಕೆಗಳಲ್ಲಿ

'ಬಂಡಾಯದ ವಿಮರ್ಶೆ ಅಗತ್ಯ': ಬರಗೂರು

ಬಂಡಾಯ ಸಾಹಿತ್ಯ ಸಂಘಟನೆ ಇದೀಗ ತನ್ನ ಹತ್ತನೆಯ ವರ್ಷಕ್ಕೆ ಕಾಲಿಟ್ಟಿದೆ. ದುಡಿಯುವವರ ಸಿಟ್ಟು, ಆಕ್ರೋಶದ ದನಿಗಳನ್ನು ಕಾವ್ಯದ ಪಲುಕುಗಳ ಮೂಲಕ ದಾಖಲೆ ಮಾಡಿದ ಬಂಡಾಯ ಸಾಹಿತ್ಯ ನಮ್ಮ ಸಾಹಿತ್ಯ ಹಂತಗಳಲ್ಲಿ ಅತ್ಯಂತ ಗಮನಾರ್ಹ ಘಟ್ಟ. ನಿಸರ್ಗದ ವರ್ಣನೆಗೆ ಮುಡಿಪಾಗಿದ್ದ ರಮ್ಯ, ದೇಶದ ಸ್ವಾತಂತ್ರ್ಯದ ಸೆಳಹುಗಳನ್ನು ಹೊಂದಿದ್ದ ನವೋದಯ, ಅಂತರ್ಮುಖಿಯಾಗಿ ವ್ಯಕ್ತಿಯೊಳಗೇ ಹುದುಗಿಕೊಂಡಿದ್ದ ನವ್ಯದ ಆಚೆಗೆ ಮೊತ್ತ ಮೊದಲ ಬಾರಿಗೆ 'ಸಮೂಹ'ದ ಕಲ್ಪನೆ ಕೊಟ್ಟದ್ದು' ಬಂಡಾಯ ಮಾತ್ರ.

'ಬಂಡಾಯ ಸಾಹಿತ್ಯ ಚಳವಳಿ ಹುಟ್ಟಿ ಹತ್ತು ವರ್ಷವಾಯಿತು. ಅಂದು ಕೊಂಡಷ್ಟು ಬೆಳವಣಿಗೆ ಏಕೆ ಆಗಿಲ್ಲ ಎಂಬ ವಿಮರ್ಶೆ ಮಾಡಿಕೊಂಡು ಹೆಚ್ಚಿನದನ್ನು ಸಾಧಿಸಲು ನಾವು ಮುಂದುವರಿಯಬೇಕು' ಎಂದು ಬರಗೂರು ರಾಮಚಂದ್ರಪ್ಪ ಬಂಡಾಯ ಇನ್ನು ತಲುಪಬೇಕಾದ ಮಹತ್ವದ ಮಜಲುಗಳತ್ತ ಬೊಟ್ಟು ಮಾಡಿದರು.

ಬಂಡಾಯ ಬರೀ ರೊಚ್ಚಲ್ಲ. ಪ್ರಶ್ನೆಯ ಪ್ರತೀಕ ಎಂದ ಅವರು ಅಂತರಂಗದೊಳಗೆ ಬಂಡಾಯದ ಕುಡಿ ಇಲ್ಲದೆ ಬಹಿರಂಗವಾಗಿ ಬಂಡಾಯದವರಂತೆ ವರ್ತಿಸಿದರೆ ಬಂಡಾಯ ಬೆಳೆಯುವುದಿಲ್ಲ ಎಂದರು.

ಸಮಕಾಲೀನ ವಿಮರ್ಶೆಯನ್ನು ಪ್ರಸ್ತಾಪಿಸುತ್ತಾ ನವ್ಯದ ಮಾನದಂಡದಿಂದ ಬಂಡಾಯ ಸಾಹಿತ್ಯದ ವಿಮರ್ಶೆ ಬೇಡ ಎಂದರು.

ಸಮ್ಮೇಳನವನ್ನು ಉದ್ಘಾಟಿಸಿದ ಕಲ್ಬುರ್ಗಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ಕೆ.ಎಚ್.ಚಲುವರಾಜು ಅವರು ಕಥೆ ಕಾದಂಬರಿ ಬರೀ ಆನಂದ ನೀಡಿದರೆ ಸಾಲದು. ಜನರಲ್ಲಿ ಅರಿವುಂಟು ಮಾಡ ಬೇಕು. ಶೋಷಿತರಲ್ಲಿ ಜಾಗೃತಿ ಉಂಟು ಮಾಡಬೇಕು ಅದಕ್ಕಾಗಿ ಬಂಡಾಯ ಸಾಹಿತ್ಯ ಸಂಘಟನೆಯ ಅಗತ್ಯ ಇದೆ ಎಂದರು.

ಎರಡು ದಿನಗಳ ಸಮ್ಮೇಳನದಲ್ಲಿ ವಿವಿಧ ವಿಚಾರಗೋಷ್ಠಿಗಳು ನಡೆದವು. ಜಾಗತಿಕ ಗೋಷ್ಠಿಯಲ್ಲಿ ಗೊರ್ಬಚೇವ್ ಅವರ ಶಾಂತಿಯ ಹುಡುಕಾಟ ಕುರಿತು ಮಾತನಾಡಿದ ಡಾ॥ ಬಿ.ಕೃಷ್ಣಮೂರ್ತಿ ಅವರು ಆರ್ಥಿಕ ರಂಗದಲ್ಲಿ ಬದಲಾವಣೆ ತರುವ ಮೂಲಕ ಶಾಂತಿ ಸ್ಥಾಪನೆ ಸಾಧ್ಯ ಎಂದರು.

ರಂಜಾನ್‌ದರ್ಗಾ ಅವರು ನೆಲ್ಸನ್ ಮಂಡೇಲಾ ಮತ್ತೆ ವಿಶ್ವ ಮಾನವೀಯ ಪ್ರಜ್ಞೆ ಕುರಿತು ಮಾತನಾಡಿ ನೆಲ್ಸನ್ ಪತ್ನಿ ವಿನ್ನಿಮಂಡೇಲ ವಿರುದ್ಧ ಬಿಳಿಯರ ಸರ್ಕಾರ ಸುಳ್ಳು ಕೊಲೆ ಆರೋಪ ಹೊರಿಸಿದೆ. ಕರಿಯರ ಸಮಾನತೆಗೆ ಹೋರಾಡುತ್ತಿರುವ ನೆಲ್ಸನ್ ಕುಟುಂಬದವರ ವಿರುದ್ಧ ಗೂಬೆ ಕೂರಿಸುವುದೇ ಈ ಕುತಂತ್ರದ ಹಿಂದಿನ ಮುಖ್ಯ ಉದ್ದೇಶ ಎಂದರು.

ಗುಡಿಹಳ್ಳಿ ನಾಗರಾಜ್ ಅವರು ಜಾತ್ಯಾತೀತತೆ ಮತ್ತು ಕೋಮು ಸೌಹಾರ್ದತೆಗೆ ಕಮ್ಯೂನಿಸ್ಟರ ಕಾಣಿಕೆ ಹೆಚ್ಚು ಮಹತ್ವದ್ದು. ಪಂಜಾಬಿನಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ. ಕಾರ್ಯಕರ್ತರು ತಮ್ಮ ಪ್ರಾಣ ಪಣಕ್ಕಿಟ್ಟು ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಎಡ ಪಂಥೀಯರ ಕಾಣಿಕೆ ದೊಡ್ಡದು. ಜೈಲ್ ಸಿಂಗ್ ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ನಿಲ್ಲಿಸಿ ಸರ್ಕಾರವನ್ನು ವಜಾ ಮಾಡುವ ಪಿತೂರಿ ನಡೆದಿದ್ದಾಗ ಈ ಚತಾವಣೆ ಬಯಲು ಮಾಡಿ ಪ್ರಜಾಸತ್ತೆ ಗಟ್ಟಿಗೊಳಿಸಿ ದವರು ಎಡ ಪಕ್ಷಗಳವರು ಎಂದರು.

ಸಾಹಿತ್ಯಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸಿ.ವೀರಣ್ಣ ಅವರು 'ಇನ್ನೊಂದು ಭಾಷೆಯನ್ನು ದ್ವೇಷಿಸಿ ಕನ್ನಡ ಪ್ರೀತಿ ಬೆಳೆಸುವುದು ಆರೋಗ್ಯಕರ ಲಕ್ಷಣವಲ್ಲ ಎಂದರು. ಸಾಂಸ್ಕೃತಿಕ ರಂಗದಲ್ಲಿ ವಿದೇಶಿ ಹಣ ಸುರಿಯುತ್ತಿರುವುದರಿಂದ ಉಂಟಾಗಬಹುದಾದ ಅಪಾಯಗಳ ಬಗೆಗೆ ವೀರಣ್ಣ ಎಚ್ಚರಿಸಿದರು.

ಸಫ್ದರ್ ಹಾಶ್ಮಿ ಕೊಲೆಗಾರರನ್ನು ಖಂಡಿಸಿ! ವಿದೇಶೀ ಹಣದ ಬಗ್ಗೆ ಎಚ್ಚರ!!

ಬಂಡಾಯ ಸಾಹಿತ್ಯ ಸಮ್ಮೇಳನ ಸ್ವೀಕರಿಸಿದ ನಿರ್ಣಯಗಳು:

1) ಎಡಪಂಥೀಯ ವಿಚಾರ ಧಾರೆಯ ನಟ, ನಿರ್ದೇಶಕ, ನಾಟಕಕಾರ ಹಾಗೂ ಪತ್ರಕರ್ತರಾಗಿದ್ದ ಸಫ್ದರ್ ಹಾಷ್ಮಿಯನ್ನು ಕಾಂಗ್ರೆ ಬೆಂಬಲಿತ ಗೂಂಡಾಗಳು ಸಾರ್ವಜನಿಕವಾಗಿ ಕೊಲೆ ಮಾಡಿರುವುದನ್ನು ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ. ಕೊಲೆಗಾರರನ್ನು ಶಿಕ್ಷಿಸುವ ಮೂಲಕ ಪ್ರಜಾಪ್ರಭುತ್ವದ ಕನಿಷ್ಠ ಕರ್ತವ್ಯ ಗಳನ್ನು ಮಾಡಬೇಕೆಂದು ಒತ್ತಾಯಿಸು ತ್ತದೆ.

2) ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತಿಗೆ ಫೋರ್ಡ್ ಫೌಂಡೇಷನ್ ಮತ್ತು ಲಾಕ್‌ಫೆಲರ್ ಫೌಂಡೇಷನ್‌ಗಳಿಂದ ಹಣ ಪಡೆಯುವುದಾಗಿ ತಿಳಿಸಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಈ ಸಂಸ್ಥೆಗಳ ಹಣ ಎಷ್ಟು ಜನರನ್ನು ದಾರಿತಪ್ಪಿಸಿದೆ ಎಂಬುದನ್ನು ಗಮನಿಸಿ ಪರಿಷತ್ತಿನ ಅಧ್ಯಕ್ಷರು ಯಾವ ಕಾರಣಕ್ಕೂ ಈ ಸಂಸ್ಥೆಗಳಿಂದ ಹಣ ತೆಗೆದುಕೊಳ್ಳ ಬಾರದೆಂದು ಸಮ್ಮೇಳನ ಒತ್ತಾಯಿಸು ತ್ತದೆ.

3) ಪ್ರಾದೇಶಿಕತೆಯ ಹೆಸರಿನಲ್ಲಿ ಪ್ರತ್ಯೇಕತಾವಾದಿ ಭಾಷಾಂಧ ಮತ್ತು ಮತಾಂಧ ಶಕ್ತಿಗಳು ಹೆಡೆಯೆತ್ತಿ ಎಲ್ಲ ಜನಾಂಗದ ಬದುಕನ್ನು ಹದಗೆಡಿಸುತ್ತಿದೆ. ಇಂಥ ಶಕ್ತಿಗಳನ್ನು ಹತ್ತಿಕ್ಕಿ ಪ್ರಾದೇಶಿಕತೆಯ ಏಳಿಗೆಯೊಂದಿಗೆ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಬೇಕೆಂದು ಸಮ್ಮೇಳನ ಕರೆ ಕೊಡುತ್ತದೆ.

4) ರಾಜ್ಯದಲ್ಲಿ ಇತ್ತೀಚೆಗೆ ಚಿಂಚೋಳಿ, ಹಲ್ಲೆಗೆರೆಗಳಲ್ಲಿ ದಲಿತರ ಮತ್ತು ಹಿಂದುಳಿದ ಜಾತಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಸಮ್ಮೇಳನ ಖಂಡಿಸುತ್ತದೆ.

ಬೆಂಗಳೂರಿನಲ್ಲಿ ಹುತಾತ್ಮ ದಿನಾಚರಣೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ, ಎನ್.ಜಿ.ಓ.ಹಾಲ್‌ನಲ್ಲಿ "ಭಗತ್ ಸಿಂಗ್ ಹುತಾತ್ಮ ದಿನಾಚರಣೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯಾಧ್ಯಕ್ಷರಾದ ಶ್ರೀ ಎಚ್.ಎನ್.ನಾಗಮೋಹನ್ ದಾಸ್ ಅವರು ವಹಿಸಿದ್ದರು.

ಮುಖ್ಯ ಭಾಷಣಕಾರರಾಗಿ ಮಾತನಾಡಿದ ಕರ್ನಾಟಕ ರಾಜ್ಯ ಕೃಷಿ ಕೂಲಿಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಬಂಡಾಯ ಸಾಹಿತಿ ಶ್ರೀ ರಮ್‌ಜಾನ್‌ದರ್ಗಾ ಅವರು ಭಗತ್‌ಸಿಂಗ್‌ರ ಹೋರಾಟದ ಜೀವನ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್‌ಸಿಂಗ್‌ರ ಪಾತ್ರ ಕುರಿತು ಮಾತನಾಡುತ್ತ ಭಗತ್‌ಸಿಂಗ್ ದಿನಾಚರಣೆಯು ಕೇವಲ ಸಾಂಪ್ರದಾಯಿಕವಾಗಿ ಆಚರಣೆ ಮಾಡದೆ ಅವರ ತ್ಯಾಗಮಯ ಹಾಗೂ ಸಮಾಜವಾದಿ ಸಿದ್ಧಾಂತಗಳನ್ನು ಯುವಜನರು ಜೀವನದಲ್ಲಿ ಅಳವಡಿಸಿಕೊಂಡರೇ ಭಗತ್‌ಸಿಂಗ್‌ರ ಹುತಾತ್ಮ ದಿನಾಚರಣೆಯು ಅರ್ಥಪೂರ್ಣವಾಗುತ್ತದೆ ಎಂದು ತಿಳಿಸಿದರು.

ಭಗತ್‌ಸಿಂಗ್ ಯಾವುದೇ ಹೋರಾಟ ಮಾಡುವಾಗಲು ಅಥವಾ ಅಸೆಂಬ್ಲಿಯಲ್ಲಿ ಬಾಂಬ್ ಎಸೆದಾಗಲೂ ಅವರ ಉದ್ದೇಶ ವಿನಿತ್ತೆಂದರೆ ಜನಸಮೂಹದ ಗಮನ ಸೆಳೆದು ಅವರನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ದಬ್ಬಾಳಿಕೆ, ಅನ್ಯಾಯದ ವಿರುದ್ಧ ಅಣಿನೆರೆಸುವುದಾಗಿತ್ತು.

ಅವರು "ಯುವ ರಾಜಕೀಯ ಕಾರ್ಯಕರ್ತರಿಗೆ ಬರೆದ ಪತ್ರ"ದಲ್ಲಿ ಜನರ ಕಷ್ಟ ಕಾರ್ಪಣ್ಯಗಳು ದೂರವಾಗಬೇಕಾದರೆ ರೈತ ಕಾರ್ಮಿಕರ ನಾಯಕತ್ವದಲ್ಲಿ ಶೋಷಣಾ ರಹಿತ ಸಮಾಜದ ಸ್ಥಾಪನೆಯಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅಲ್ಲದೆ ಅಂದಿನ ಕಾಂಗ್ರೆಸ್ ಪಕ್ಷವೂ ಸಹ ಬಂಡವಾಳಗಾರರಿಗೆ ಹಾಗೂ ಭೂಮಾಲೀಕರಿಗೆ ನಾಯಕತ್ವವನ್ನು ನೀಡುತ್ತಿತ್ತು ಎಂಬುದನ್ನು ಸಹ ಗಮನಿಸಿದ್ದರು. 20ರ ಹರೆಯದಲ್ಲೇ ಉತ್ಕೃಷ್ಟ ಹೋರಾಟತನವನ್ನು ಹೊಂದಿದ್ದ ಭಗತ್‌ಸಿಂಗ್ ಹಾಗೂ ಅವರ ಸ್ನೇಹಿತರು ತಮಗೆ ಸಿಂಹಸ್ವಪ್ನವಾಗುತ್ತಾರೆ ಎಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಅವರನ್ನು ಗಲ್ಲಿಗೇರಿಸಿದರು.

ಗಲ್ಲಿಗೇರುವ ಮೊದಲು ಕೆಲವು ನಿಮಿಷಗಳವರೆಗೂ ಲೆನಿನ್ ಪುಸ್ತಕವನ್ನು ಓದುತ್ತಿದ್ದರು ಎಂಬುದಕ್ಕೆ ಪುರಾವೆಗಳಿವೆ. ರಷ್ಯನ್ ಮಹಾಕ್ರಾಂತಿಯಿಂದ ಪ್ರೇರೇಪಿತರಾದ ಭಗತ್‌ಸಿಂಗರು ಸಾವಿಗೆಂದೂ ಅಂಜಿದವರಲ್ಲ. ಸಾವು ಸಮೀಪಿಸುತ್ತಿದ್ದರೂ ನೇಣುಗಂಬವನ್ನು ನಗುನಗುತ್ತ ಏರಿದ ಧೀಮಂತ ವ್ಯಕ್ತಿಯಾಗಿದ್ದರು.

ಈ ಮಹಾನ್ ಕ್ರಾಂತಿಕಾರಿ ಯುವಕನ ಆದರ್ಶಗಳು ಇಂದಿನ ಭಾರತದಲ್ಲಿರುವ ಬಂಡವಾಳಶಾಹಿ ಭೂಮಾಲಿಕ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಸಮಾಜವಾದ ವ್ಯವಸ್ಥೆಯನ್ನು ಸ್ಥಾಪನೆ ಮಾಡಲು ಸ್ಫೂರ್ತಿ ಮತ್ತು ಧೈರ್ಯವನ್ನು ನೀಡಲಿ ಎಂದು ಆಶಿಸಿದರು.

ಕೊನೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಎಸ್.ಶಿವರಾಂ ಹಾಗೂ ಜಿಲ್ಲಾ ಕಾರ್ಯದರ್ಶಿ ಟಿ.ಶಿವಶಂಕರ್ ಪ್ರಸಕ್ತ ರಾಜಕೀಯ ಪರಿಸ್ಥಿತಿ ಹಾಗೂ ಮಾರ್ಚ್ 28ರ ನಿರುದ್ಯೋಗ ವಿರೋಧಿ ವಾರಾಚರಣೆ ಹಾಗೂ ರಾಜ್ಯ ಮಟ್ಟದ ಯುವಜನ ರ್‍ಯಾಲಿ ಕುರಿತು ಮಾತನಾಡಿದರು.

ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಗೋಪಾಲಕೃಷ್ಣ ಹಾಗೂ ವಂದನಾರ್ಪಣೆಯನ್ನು ಶ್ರೀ ಶ್ರೀನಿವಾಸ್ ಮಾಡಿದರು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ವಕೀಲರೂ ರೈತ ಕಾರ್ಮಿಕರು, ವಿದ್ಯಾರ್ಥಿ ಯುವಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರಾಜಗೋಪಾಲನಗರ ಡಿ.ವೈ.ಎಫ್.ಐ. ಘಟಕ

ದಿನಾಂಕ 26-3-89ರ ಭಾನುವಾರದಂದು ಬೆಂಗಳೂರು ನಗರದ ರಾಜಗೋಪಾಲನಗದಲ್ಲಿರುವ ಡಿ.ವೈ.ಎಫ್.ಐ. ಘಟಕವು ರಾಜ್ಯ ಹಾಗೂ ಜಿಲ್ಲಾ ಸಮಿತಿಯ ಕರೆಯ ಮೇರೆಗೆ ಮಾರ್ಚ್ 28ರ ನಿರುದ್ಯೋಗ ವಿರೋಧಿ ದಿನಾಚರಣೆಯ ಪ್ರಚಾರದ ಅಂಗವಾಗಿ ನಗರ ಹಾಗೂ ಹಳ್ಳಿ ಪ್ರದೇಶಗಳಲ್ಲಿ ಸೈಕಲ್ ರ್‍ಯಾಲಿಯನ್ನು ಜಿಲ್ಲಾ ಸಮಿತಿ ಸದಸ್ಯರ ನೇತೃತ್ವದಲ್ಲಿ ಸುಮಾರು 5 ಗಂಟೆಗಳ ಕಾಲ ಯಶಸ್ವಿಯಾಗಿ ನಡೆಸಲಾಗಿದೆ.

ಮುಳಬಾಗಿಲು

ಭಗತ್‌ಸಿಂಗ್ ದಿನಾಚರಣೆ ಅಂಗವಾಗಿ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಕಾ॥ ಕೆ.ಆರ್.ರಾಜಣ್ಣನವರು ವಹಿಸಿದ್ದರು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಎಂ.ಎ. ನಾರಾಯಣಸ್ವಾಮಿ, ಕೆ.ವಿ.ನಾಗರಾಜ್‌ರವರು ಭಾಗವಹಿಸಿ ಮಾತನಾಡಿದರು. ಕಾ॥ ಎಂ.ಗೋಪಾಲ್‌ರವರು ಕಾರ್ಯಕ್ರಮ ಉದ್ಘಾಟಿಸಿದರು.

ತಮಿಳುನಾಡು ವಿಧಾನಸಭೆಯಲ್ಲಿ ಹಿಂಸಾಚಾರ ಎ.ಐ.ಡಿ.ಎಂ.ಕೆ.-ಕಾಂಗ್ರೆಸ್(ಐ)ನ ಜಂಟಿ ಯೋಜನೆ

ತಮಿಳುನಾಡಿನ ವಿಧಾನಸಭೆಯಲ್ಲಿ. ಮಾರ್ಚ್ 25 ರಂದು ಎಡಿಎಂಕೆ ಮತ್ತು ಕಾಂಗ್ರೆಸ್(ಐ) ಮುಖಂಡರು ಪೂರ್ವಯೋಜಿತ ರೀತಿಯಲ್ಲಿ ನಡೆಸಿದ ಹಿಂಸಾಚಾರವನ್ನು ಸಿ.ಪಿ.ಐ.(ಎಂ)ನ ತಮಿಳುನಾಡು ರಾಜ್ಯ ಸೆಕ್ರೆಟಾರಿಯೇಟ್ ಬಲವಾಗಿ ಖಂಡಿಸಿದೆ. ಈ ಪಕ್ಷಗಳ ಪ್ರಚೋದನೆಗೆ ಒಳಗಾಗದೆ ರಾಜಕೀಯವಾಗಿ ಅವರನ್ನು ಎದುರಿಸಿ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಬೇಕೆಂದು ಹೇಳಿಕೆ ಕರೆ ನೀಡಿದೆ.

ಮಾರ್ಚ್ 25 ರಂದು ನಡೆದ ಘಟನೆಗಳು ದಿಗ್ಭ್ರಮೆಯುಂಟುಮಾಡಿದೆ. ಇದೊಂದು ಪೂರ್ವಯೋಜಿತ ಕ್ರಮ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುತ್ತದೆಂದು ತಿರುನಾವುಕ್ಕರಸು ಹೇಳುತ್ತಾ ಬರುತ್ತಿರುವುದು, ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನಾ ಸಭೆಗಳಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸುತ್ತಿರುವುದು ಮತ್ತು ಅದರ ಮುಂದುವರಿಕೆಯಾಗಿ ವಿಧಾನ ಸಭೆಯೊಳಗೆ ಗಲಭೆ ನಡೆಸಿರುವುದು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕೆಂಬ ದುರುದ್ದೇಶದಿಂದಲೇ ಎಂಬುದಾಗಿ ಸಿ.ಪಿ.ಐ.(ಎಂ) ಭಾವಿಸುತ್ತದೆ. ಜನತೆಯಿಂದ ಚುನಾಯಿತಗೊಂಡ ಡಿ.ಎಂ.ಕೆ. ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್(ಐ) ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳಬಹುದೆಂಬ ಶಂಕೆಯನ್ನು ಸಿ.ಪಿ.ಐ.(ಎಂ) ವ್ಯಕ್ತಪಡಿಸಿದೆ.

ವಿಧಾನಸಭೆಯ ಕಲಾಪಗಳು ನಡೆಯುವಾಗ ಮುಖ್ಯಮಂತ್ರಿಗಳ ಕೈನಿಂದ ಬಡ್ಜೆಟಿನ ಕಾಗದಗಳನ್ನು ಕಸಿದುಕೊಂಡು ಅದನ್ನು ಹರಿದುಹಾಕಿ ಹಲ್ಲೆ ನಡೆಸಲು ಎ.ಡಿ.ಎಂ.ಕೆ. ಯತ್ನಿಸಿದ್ದನ್ನು ಹೇಳಿಕೆಯಲ್ಲಿ ಖಂಡಿಸಲಾಗಿದೆ. ಇಂಥದೇ ರೀತಿಯ ಹಿಂಸಾಚಾರ ಕಳೆದ ವಿಸರ್ಜಿತ ವಿಧಾನಸಭೆಯಲ್ಲಿ ಎ.ಡಿ.ಎಂ.ಕೆ.ಯ ಎರಡೂ ಬಣಗಳ ನಡುವೆ ನಡೆದು ಅದನ್ನು ಕಾಂಗ್ರೆ ಬಳಸಿಕೊಂಡು ಮಧ್ಯಪ್ರವೇಶಿಸಿದ್ದನ್ನು ಕೊನೆಗೆ ವಿಧಾನಸಭೆಯ ವಿಸರ್ಜನೆ ಗೊಂಡಿದ್ದನ್ನು ಸಿ.ಪಿ.ಐ.(ಎಂ) ತನ್ನ ಹೇಳಿಕೆಯಲ್ಲಿ ಎತ್ತಿ ತೋರಿಸಿದೆ.

ಪ್ರಸ್ತುತ ಪ್ರಕರಣದ ಕುರಿತು ಕಾಂಗ್ರೆಸ್(ಐ) ಮತ್ತು ಎ.ಡಿ.ಎಂ.ಕೆಗಳು ನೀಡಿರುವ ಹೇಳಿಕೆಗಳು ಸುಳ್ಳುಗಳಿಂದ ಕೂಡಿದ್ದು ಅದು ಆ ಪಕ್ಷಗಳ ಕಾರ್ಯಕರ್ತರನ್ನು ಪ್ರಚೋದಿಸಿ ರಾಜ್ಯದಲ್ಲಿ ಗಲಭೆಯುಂಟು ಮಾಡುವ ಪ್ರಯತ್ನವಾಗಿದೆ.

ಕಾಂಗ್ರೆಸ್(ಐ) ಮತ್ತು ಎ.ಡಿ.ಎಂ.ಕೆ. ಪಕ್ಷಗಳು ನಡೆಸುತ್ತಿರುವ ಗಲಭೆಯ ಪ್ರಯತ್ನಗಳನ್ನು ರಾಜಕೀಯ ರೀತಿಯಲ್ಲಿ ಎದುರಿಸಲು ಎಡ ಮತ್ತು ಜನತಾಂತ್ರಿಕ ಶಕ್ತಿಗಳು ಮುಂದೆ ಬರಬೇಕು. ಡಿ.ಎಂ.ಕೆ. ಸರ್ಕಾರ ಮತ್ತು ಪಕ್ಷ ಎಚ್ಚರದಿಂದ ಇದ್ದು ಇಂತಹ ಕೃತ್ಯಗಳನ್ನು ರಾಜಕೀಯವಾಗಿ ಎದುರಿಸಲು ಸಿದ್ಧವಾಗಿರಬೇಕು.

ಆದರೆ ದುರದೃಷ್ಟವಶಾತ್ ವಿರೋಧ ಪಕ್ಷದ ನಾಯಕಿ ಜಯಲಲಿತ ರಾಜೀನಾಮೆ ಪತ್ರಕ್ಕೆ ಸಂಬಂಧಿಸಿದಂತೆ ಮದ್ರಾಸಿನ ಪೊಲೀಸ್ ಅಧಿಕಾರಿಗಳು ವರ್ತಿಸಿದ ರೀತಿಯಿಂದಾಗಿ ಜಯಲಲಿತರವರನ್ನು ಪದವಿಯಿಂದ ಕಿತ್ತೆಸೆಯಲು ಸರ್ಕಾರೀ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆಯೆಂಬ ಭಾವನೆ ಜನತೆಯಲ್ಲಿ ಬಲವಾಗಿ ಮೂಡಿದೆ. ಈ ಬಗ್ಗೆ ಸರ್ಕಾರ ನೀಡಿರುವ ವಿವರಣೆ ತೃಪ್ತಿಕರವಾಗಿಲ್ಲವೆಂಬುದಾಗಿ ಸಿ.ಪಿ.ಐ.(ಎಂ)ನ ಹೇಳಿಕೆಯಲ್ಲಿ ಅಭಿಪ್ರಾಯಪಡಲಾಗಿದೆ.

ಕೇಂದ್ರ ಸರ್ಕಾರದ ಬಜೆಟ್‌ನಿಂದ ತತ್ತರಿಸಿರುವ ಜನತೆಯನ್ನು ದಿಕ್ಕು ತಪ್ಪಿಸುವ ರೀತಿಯಲ್ಲಿ ಈ ವಿದ್ಯಮಾನಗಳು ಸಹಾಯಕವಾಗುತ್ತದೆ ಯೆಂಬುದಾಗಿ ಹೇಳಿಕೆಯಲ್ಲಿ ತಿಳಿಸಲಾಗಿದ್ದು ಈ ಘಟನೆಯನ್ನು ರಾಜ್ಯದ ಶಾಂತಿಯನ್ನು ಹಾಳುಗೆಡವಲು ಬಳಸಿಕೊಳ್ಳುವ ಕಾಂಗ್ರೆ ಮತ್ತು ಎ.ಡಿ.ಎಂ.ಕೆ.ಗಳ ಸ್ವಾರ್ಥ ರಾಜಕೀಯ ಪ್ರಯತ್ನವನ್ನು ಮುರಿಯಬೇಕೆಂದು ಸಿ.ಪಿ.ಐ.(ಎಂ) ಜನತೆಗೆ ಮನವಿ ಮಾಡಿಕೊಂಡಿದೆ.

ತೋಟ ಕಾರ್ಮಿಕರ ಸಂಘಟನೆಯಲ್ಲಿ ಮೈಲಿಗಲ್ಲಾದ ದಕ್ಷಿಣ ವಲಯ ಸಮ್ಮೇಳನ

ಮುನಾರ್: ಅಖಿಲಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಷನ್‌ನ ದಕ್ಷಿಣ ವಲಯ ಸಮ್ಮೇಳನವು ಮಾರ್ಚ್ 18 ಮತ್ತು 19ರಂದು ಕೇರಳ ರಾಜ್ಯದ ಇಡಿಕಿ ಜಿಲ್ಲೆಯ ಮುನಾರ್‌ನಲ್ಲಿ ನಡೆಯಿತು. ಈ ಸಮ್ಮೇಳನಕ್ಕೆ ಕೇರಳ, ತಮಿಳುನಾಡು ಮತ್ತು ಕರ್ನಾಟಕದಿಂದ ಪ್ರತಿನಿಧಿಗಳು ಭಾಗವಹಿಸಿದ್ದು ಸಮ್ಮೇಳನದ ಅಧ್ಯಕ್ಷತೆಯನ್ನು ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್‌ನ ಉಪಾಧ್ಯಕ್ಷರಾದ ಕಾ|| ಕೆ.ಪದ್ಮನಾಭನ್ ವಹಿಸಿದ್ದರು.

ಸಮ್ಮೇಳನ ನಡೆಯುವ ಸ್ಥಳಕ್ಕೆ ಕಾ|| ಚಿಂತನ್ ನಗರ್ ಎಂದು ಹೆಸರಿಸಿದ್ದು, ಹುತಾತ್ಮರಿಗೆ ಪುಷ್ಪಾಂಜಲಿ ಅರ್ಪಿಸಿದ ನಂತರ ಸಮ್ಮೇಳನ ಪ್ರಾರಂಭವಾಯ್ತು. ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕಾ|| ವಿಮಲ ರಣದಿವೆ ಉದ್ಘಾಟನೆ ಮಾಡಿ ಮಾತನಾಡುತ್ತಾ ದೇಶದ ತೋಟ ಕಾರ್ಮಿಕರ ಚಿಂತಾಜನಕ ಪರಿಸ್ಥಿತಿಯ ಬಗ್ಗೆ ವಿವರಿಸಿ, ಅಸ್ಸಾಂನ ಕೋಕ್ರಾಜಾರ್‌ನಲ್ಲಿ 1988ರ ಏಪ್ರಿಲ್‌ನಲ್ಲಿ ಎ.ಐ.ಪಿ.ಡಬ್ಲ್ಯೂ.ಎಫ್.ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ಲಾಂಟೇಷನ್ ರಾಜ್ಯ ಗಳನ್ನು ಉತ್ತರ ವಲಯ ಹಾಗೂ ದಕ್ಷಿಣ ವಲಯವೆಂದು ಎರಡು ವಲಯಗಳಾಗಿ ವಿಂಗಡಿಸಿ ಆಯಾ ಪ್ರದೇಶಗಳ ಕೆಲಸಗಳನ್ನು ಸಮನ್ವಯ ಮಾಡಿ ಸಂಘಟನೆಯನ್ನು ವಿಸ್ತರಿಸಲು ಕೈಗೊಂಡ ತೀರ್ಮಾನವನ್ನು ವಿವರಿಸಿದರು.

ಸಮ್ಮೇಳನವನ್ನುದ್ದೇಶಿಸಿ ಕೇರಳದಿಂದ ಸಂಗಾತಿಗಳಾದ ಜಿನದೇವನ್,. ಪರಮೇಶ್ವರನ್ ಪಿಳ್ಳೈ ಕುಂಞಕಣ್ಣನ್ ತಮಿಳುನಾಡಿನ ಸಂಗಾತಿಗಳಾದ ಗೋಪಾಲ ಮತ್ತು ಹೇಮಚಂದ್ರನ್ ಮತ್ತು ಕರ್ನಾಟಕದಿಂದ ಕಾ|| ವಿ.ಸುಕುಮಾರ್ ಹಾಗೂ ಕಾ|| ಸಿ.ನಂಜುಂಡಪ್ಪ ಮಾತನಾಡಿ ಆಯಾ ರಾಜ್ಯಗಳ ಸಂಘಟನೆಯ ಪರಿಸ್ಥಿತಿ, ಸಂಘಟನಾ ಸಮಸ್ಯೆಗಳು, ಹಾಗೂ ಅಖಿಲ ಭಾರತ ಕರೆಗಳನ್ನು ಯಶಸ್ವಿಗೊಳಿಸುವಲ್ಲಿ ಪ್ಲಾಂಟೇಶನ್ ಕಾರ್ಮಿಕರ ಪಾತ್ರ ಇತ್ಯಾದಿಗಳ ಬಗ್ಗೆ ಹೇಳಿದರು.

ತೋಟ ಕಾರ್ಮಿಕರ ಕಾಯಿದೆ 1988ರ ತಿದ್ದುಪಡಿಗೆ (ಸಲಹೆ ಸೂಚನೆ) ತಿದ್ದುಪಡಿಯನ್ನು ಸಿದ್ಧಪಡಿಸಿ ಮಾರ್ಚ್ ತಿಂಗಳೊಳಗೆ ದೆಹಲಿಗೆ ಸಂಸತ್ ಸದಸ್ಯ ಹಾಗೂ ಆಲ್ ಇಂಡಿಯಾ ಪ್ಲಾಂಟೇಷನ್ ವರ್ಕರ್ಸ್ ಫೆಡರೇಷನ್‌ನ ಅಧ್ಯಕ್ಷರಾದ ಕಾ|| ಆನಂದಪಾಠಕ್‌ರವರಿಗೆ ಕಳುಹಿಸಲು ತೀರ್ಮಾನಿಸಿತು.

ದಕ್ಷಿಣ ವಲಯ ರಾಜ್ಯಗಳಿಂದ ಕೇರಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಪ್ಲಾಂಟೇಷನ್ ಕಾರ್ಮಿಕ ಸಂಘಗಳ ಕೆಲಸವನ್ನು ಸಮನ್ವಯಗೊಳಿಸಲು 17 ಸದಸ್ಯರಿರುವ ಸೌತ್ ಜೋನ್ ಕಮಿಟಿ ಚುನಾಯಿಸಲಾಯ್ತು. ಈ ಸೌತಾಜೋನ್ ಸಮಿತಿಗೆ ಕೇರಳದಿಂದ 11 ತಮಿಳುನಾಡಿನಿಂದ 3 ಮತ್ತು ಕರ್ನಾಟಕ ದಿಂದ ಮೂವರು ಸದಸ್ಯರಿದ್ದು ಕಾ|| ಕೆ.ಪದ್ಮನಾಭನ್ ಈ ಸಮನ್ವಯ ಸಮಿತಿ ಕಾರ್ಯದರ್ಶಿಯಾಗಿದ್ದಾರೆ. ಕರ್ನಾಟಕ ದಿಂದ ಸಂಗಾತಿಗಳಾದ ಸಿ.ನಂಜುಂಡಪ್ಪ, ವಿ.ಸುಕುಮಾರ್ ಮತ್ತು ಇಬ್ರಾಹಿಂ ಸದಸ್ಯರುಗಳಾಗಿದ್ದಾರೆ.

ತೋಟ ಕಾರ್ಮಿಕರ ಕಾಯಿದೆಯಲ್ಲಿರುವ ಸೌಲಭ್ಯಗಳನ್ನು ಅನುಷ್ಠಾನಕ್ಕೆ ತರಲು ಒತ್ತಾಯಿಸಿ ಮೇ ತಿಂಗಳ 3ರಿಂದ 10ರವರೆಗೆ ಈ ಮೂರು ರಾಜ್ಯಗಳಲ್ಲಿ ವಾರಾಚರಣೆ ಆಚರಿಸಲು ತೀರ್ಮಾನ ಕೈಗೊಳ್ಳಲಾಯ್ತು. ಮುಂದಿನ ಕರ್ತವ್ಯಗಳ ಜ್ಯಾರಿಯ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಮೇ ತಿಂಗಳ 26ರಂದು ಕೇರಳದ ಪಟ್ಟಾನ್‌ತಿಟ್ಟಂನಲ್ಲಿ ಜೋನಲ್ ಕಮಿಟಿಯನ್ನು ಕರೆಯಲಾಗಿದೆ.

ಸಮ್ಮೇಳನದ ಪ್ರಾರಂಭದಲ್ಲಿ ಮುನ್ನಾರ್ ಪ್ರದೇಶದ ತೋಟ ಕಾರ್ಮಿಕರ ಮುಖಂಡ ಹಾಗೂ ಸ್ಥಳೀಯ ಶಾಸಕರಾದ ಸಂಗಾತಿ ಸುಂದರ ಮಾಣಿಕ್ಯಂ ಸ್ವಾಗತಿಸಿದರು.

ತಾ|| 19ರಂದು ನಡೆದ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆಯಲ್ಲಿ ಸಾವಿರಾರು ತೋಟ ಕಾರ್ಮಿಕರು ಭಾಗವಹಿಸಿದ್ದು, ಕಾ|| ವಿಮಲರಣದಿವೆ, ಕಾ|| ಕೆ.ಪದ್ಮನಾಭನ್, ಕಾ|| ಸಿ.ನಂಜುಂಡಪ್ಪ ಹೇಮಚಂದ್ರನ್, ಗೋಪಾಲ್ ಸುಂದರ ಮಾಣಿಕ್ಯಂ ಜೆ.ಚಂದ್ರನ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈ ಸಮ್ಮೇಳನವು ಈ ಮೂರು ರಾಜ್ಯಗಳ ತೋಟ ಕಾರ್ಮಿಕರ ಸಂಘಟನೆಯ ಸಮನ್ವಯಗೊಳಿಸಿ ಬಲಪಡಿಸಲು ಒಂದು ಮೈಲಿಗಲ್ಲಾಗಿದೆ.

ಕೃಷಿ ಕೂಲಿಕಾರರ ಧರಣಿ ಸತ್ಯಾಗ್ರಹ

ಬೆಂಗಳೂರು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಉಪ ವಿಭಾಗಾಧಿಕಾರಿಗಳವರ ಕಛೇರಿ ಎದುರು. ತಾ|| 27-3-89ರಂದು ಬೆಳಿಗ್ಗೆ 11 ಘಂಟೆಯಿಂದ ಕೃಷಿ ಕೂಲಿಗಾರರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನೂರಾರು ಜನ ಕೃಷಿ ಕೂಲಿಗಾರರು ಮತ್ತು ಮಹಿಳೆಯರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಅನಂತರ ಉಪವಿಭಾಗಾಧಿಕಾರಿಗಳಿಗೂ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ತಹಸೀಲ್ದಾರರವರಿಗೂ ಸಂಚಾಲಕರಾದ ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಮನವಿ ಅರ್ಪಿಸಲಾಯಿತು. ಅನಂತರ ಸಭೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಸಂಚಾಲಕರಾದ ವೆಂಕಟಾಚಲಯ್ಯ ಮತ್ತು ರೈತ ಸಂಘದ ಮುಖಂಡರಾದ ಎ.ವಿ.ರಮೇಶ್, ಬೆಂಬಲ ಸೂಚಿಸಿ ಮಾತನಾಡಿದರು.

ಸರ್ಕಾರಿ ಜಮೀನಿನ ಆಗಮೆದಾರರ ಪ್ರದರ್ಶನ

ಬಂಟ್ವಾಳ ತಾಲೂಕಿನ ಸುಮಾರು 400 ಮಂದಿ ಸರ್ಕಾರಿ ಜಮೀನನ್ನು ಅಕ್ರಮ ಸ್ವಾಧೀನ ಪಡಿಸಿ ಕೃಷಿಕೃತ ಮಾಡಿ ಹಲವು ಬಾರಿ ವೈಯುಕ್ತಿಕ ಅರ್ಜಿಗಳನ್ನು ಸಲ್ಲಿಸಿ ಸರ್ಕಾರ ಸಕ್ರಮಗೊಳಿಸಲು ಒತ್ತಾಯಿಸಿದರೂ ಕ್ರಮ ಕೈಗೊಳ್ಳದ್ದರಿಂದ ಕೈಗೊಳ್ಳದ್ದರಿಂದ ತಾ|| 21ರಂದು ಬಂಟ್ವಾಳ ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ಬೃಹತ್ ಪ್ರದರ್ಶನ ನಡೆಸಿ ಹಕ್ಕು ಪತ್ರವನ್ನು ಕೊಡುವಂತೆ ಒತ್ತಾಯಿಸಿದರು.

ರೈತ ಸಂಘದ ವತಿಯಿಂದ ಮನವಿಯೊಂದನ್ನು ಬಂಟ್ವಾಳ ತಾಲೂಕು ತಹಶೀಲ್ದಾರರ ಮೂಲಕ ಮಂಗಳೂರಿನ ಸಹಾಯಕ ಕಮೀಷನರ್‌ರರಿಗೆ ಸಲ್ಲಿಸಿ ಬಡವರು ಆಕ್ರಮಿಸಿರುವ ಸರ್ಕಾರಿ ಜಮೀನನ್ನು ಯಾವುದೇ ರೀತಿಯ ದಂಡನೆ ಹಾಗೂ ಬೆಲೆ ವಿಧಿಸದೆ ಹಕ್ಕು ಪತ್ರವನ್ನು ಉಚಿತವಾಗಿ ನೀಡಬೇಕೆಂದು ಒತ್ತಾಯಿಸಿ ರೈತ ಸಂಘದ ನೇತೃತ್ವದಲ್ಲಿ ಬಡ ಆಗಮೆದಾರರು ಕಳೆದ ಒಂದು ವರ್ಷದಿಂದ ಸುಮಾರು 2000 ವೈಯುಕ್ತಿಕ ಅರ್ಜಿಗಳನ್ನು ಸಲ್ಲಿಸಿ ಅಕ್ರಮವನ್ನು ಸಕ್ರಮಗೊಳಿಸಬೇಕೆಂದು ಕೇಳಿ ಕೊಂಡಿದ್ದರು. ಅನೇಕ ಗ್ರಾಮಗಳಲ್ಲಿ ಈ ಬಗ್ಗೆ ತನಿಖೆ ವಿಳಂಬವಾಗುತ್ತಿದೆ ಎಂದು ರೈತ ಸಂಘವು ದೂರಿದೆ.

ಮನವಿಯನ್ನು ಸಲ್ಲಿಸಿದ ನಂತರ ಬಿ.ಸಿ.ರೋಡಿನಲ್ಲಿ ಜರುಗಿದ ಸಭೆಯನ್ನು ಉದ್ದೇಶಿಸಿ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಶ್ರೀ ಯು ಜನಾರ್ಧನ ನ್ಯಾಯ್ಕ, ಬಂಟ್ವಾಳ ತಾಲೂಕು ರೈತ ಸಂಘದ ಅಧ್ಯಕ್ಷ ಬಿ.ವಾಸುಗಟ್ಟಿ, ಕಾರ್ಯದರ್ಶಿ ಬಿ.ನಾರಾಯಣ ಮಾತನಾಡಿದರು.

ಪ್ರದರ್ಶನ ನೇತೃತ್ವವನ್ನು ರೈತ ಸಂಘದ ಮುಖಂಡರಾದ ಶ್ರೀ ಬಿ.ಹೂವಯ್ಯ ಬಂಗೇರ, ಕುದನೆ ಚೆನ್ನಪ್ಪ ಬಂಗೇರ, ಎಂ.ಮಾರಪ್ಪ ಮೊದಲಾದವರು ವಹಿಸಿದ್ದರು.

ಸಿ.ಐ.ಟಿ.ಯು ನೇತೃತ್ವದಲ್ಲಿ ಹೋರಾಟಗಳ ಬಗ್ಗೆ ತೀರ್ಮಾನ

ಬೆಂಗಳೂರು; ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪದಾಧಿಕಾರಿಗಳ ಮೊದಲ ನೆಯ ಸಭೆಯು ತಾ|| 26-3-89ರಂದು ಎಸ್.ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರಿ ಸಿ.ಐ.ಟಿ.ಯು. 5 ನೆಯ ರಾಜ್ಯ ಸಮ್ಮೇಳನದ ತೀರ್ಮಾನಗಳ ಜ್ಯಾರಿಯ ಬಗ್ಗೆ ಚರ್ಚಿಸಿತು.

ನವದೆಹಲಿಯಲ್ಲಿ ಏಪ್ರಿಲ್ 3, 4ರಂದು ನಡೆಯುವ ಹತ್ತಿಗಿರಣಿ ಕಾಮಿಕರ ಮುಖಂಡರ ಅಖಿಲ ಭಾರತ ಸಭೆಗೆ ಕಾ|| ವಿ.ಜೆ.ಕೆ.ನಾಯರ್ ಹಾಗೂ ಬೆಂಗಳೂರಿನ ಬಿನ್ನಿಮಿಲ್, ಮಿನರ್ವ ಮಿಲ್, ಮೈಸೂರು ಮಿಲ್ ಹಾಗೂ ಗುಲ್ಬರ್ಗಾದ ಎಂ.ಎಸ್.ಕೆ.ಮಿಲ್‌ಗಳಿಂದ ಒಬ್ಬೊಬ್ಬ ಮುಖಂಡರು ಈ ಸಭೆಯಲ್ಲಿ ಭಾಗವಹಿಸುವುದೆಂದು ತೀರ್ಮಾನಿಸಲಾಯ್ತು.

ಅಂಗನವಾಡಿ ಕಾರ್ಯಕರ್ತೆಯರ ಅಖಿಲಭಾರತ ಸಮಾವೇಶಕ್ಕೆ ರಾಜ್ಯದಿಂದ ಮೂವರು ಪ್ರತಿನಿಧಿಗಳನ್ನು ಕಳುಹಿಸಲು ಸಭೆಯಲ್ಲಿ ತೀರ್ಮಾನಿಸಲಾಯ್ತು.

ಸೋವಿಯತ್ ಯೂನಿಯನ್ ಆಮಂತ್ರಣದ ಮೇಲೆ ನಮ್ಮ ದೇಶದಿಂದ ಹೋಗುವ ಸಿ.ಐ.ಟಿ.ಯು. ಪ್ರತಿನಿಧಿಗಳ ಪೈಕಿ ಈಗಾಗಲೆ ಕೇಂದ್ರದ ಸಮಿತಿಯ ಸಂಗಾತಿ ಎಂ.ಎಂ.ರಾಜಮ್ಮನವರ ಹೆಸರನ್ನು ಸೂಚಿಸಿದ್ದು, ಪದಾಧಿಕಾರಿಗಳ ಸಭೆಯಲ್ಲಿ, ಸಂಗಾತಿಗಳಾದ ಎಂ.ಬಿ.ಕಬ್ಬಿ ಮತ್ತು ಶೃಂಗೇಶ್ವರ್‌ರವರ ಹೆಸರುಗಳನ್ನು ಸೂಚಿಸಲು ತೀರ್ಮಾನಿಸಲಾಯ್ತು.

ಏಪ್ರಿಲ್ 11ರಂದು ನವದೆಹಲಿಯ ಬೋಟ್‌ಕ್ಲಬ್‌ನಲ್ಲಿ ಅಖಿಲ ಭಾರತ ಸಾರಿಗೆ ನೌಕರರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ನಡೆಸುವ ಪ್ರದರ್ಶನಕ್ಕೆ ರಾಜ್ಯದಿಂದ 5 ಪ್ರತಿನಿಧಿಗಳು ಭಾಗವಹಿಸುವುದೆಂದು ತೀರ್ಮಾನಿಸಲಾಯ್ತು.

ಮೇ ದಿನಾಚರಣೆಯನ್ನು ಜಂಟಿಯಾಗಿ ನಡೆಸಲು ಸಿ.ಐ.ಟಿ.ಯು. ಸಂಯೋಜಿತ ಸಂಘಗಳು ಪ್ರಯತ್ನಿಸಬೇಕೆಂದು ತೀರ್ಮಾನಿಸಲಾಯ್ತು.

ಸಕ್ಕರೆ ಕಾರ್ಮಿಕರ ಅಖಿಲ ಭಾರತ ಬೇಡಿಕೆಗಳಿಗಾಗಿ ಏಪ್ರಿಲ್ 11ರಂದು ದೆಹಲಿಯಲ್ಲಿ ನಡೆಯುವ ಪ್ರದರ್ಶನಕ್ಕೆ ರಾಜ್ಯದಿಂದ ಪ್ರತಿನಿಧಿಗಳು ಸಂಬಂಧಪಟ್ಟ ಸಂಘದಿಂದ ಹೋಗಲು ನಿರ್ದೇಶನ ಕೊಡಲಾಯ್ತು.

ರಾಜ್ಯದ ತೋಟ ಕಾರ್ಮಿಕರ ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆ ಹೊರಡಿಸಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದರ ವಿರುದ್ಧ, ತೋಟ ಕಾರ್ಮಿಕರ 1981ರ ತಿದ್ದುಪಡಿ ಕಾಯಿದೆಗೆ ರಾಜ್ಯ ಸರ್ಕಾರ ನಿಯಮ ರಚಿಸದೆ ಇರುವುದು, ವೈದ್ಯಕೀಯ ಸೌಲಭ್ಯಗಳ ನಿಯಮ ಜ್ಯಾರಿ ಮಾಡದೆ ಇರುವುದರ ವಿರುದ್ಧ ರಾಜ್ಯದ ವಿವಿಧ ಕಾರ್ಮಿಕ ಸಂಘಗಳು ಜಂಟಿ ಹೋರಾಟದ ಕಾರ್ಯಕ್ರಮ ಹಾಕಿಕೊಂಡಿದ್ದು, ಮೊದಲ ಹಂತವಾಗಿ ತಾ|| 29-3-1989 ರಂದು ಹಾಸನದ ಉಪ ಕಾರ್ಮಿಕ ಆಯುಕ್ತರ ಕಛೇರಿ ಚಿಕ್ಕಮಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿ, ಮಡಿಕೇರಿಯಲ್ಲಿ ಕಾರ್ಮಿಕ ಅಧಿಕಾರಿಯವರ ಕಛೇರಿಯ ಮುಂದೆ ಕಾರ್ಮಿಕ ಮುಖಂಡರುಗಳ ಹಾಗೂ ಕಾರ್ಮಿಕರ ಧರಣಿ ಸತ್ಯಾಗ್ರಹವನ್ನು ಬೆಂಬಲಿಸುವ ನಿರ್ಣಯ ಕೈಗೊಳ್ಳಲಾಯ್ತು.

ಕಾಂಟ್ರಾಕ್ಟ್ ಪದ್ಧತಿಯನ್ನು ವಿರೋಧಿಸಿ ತಾ|| 18-4-1989ರಂದು ರಾಜ್ಯದಾದ್ಯಂತ ಬೀಡಿ ಕಾರ್ಮಿಕರು ನಡೆಸುವ ಮುಷ್ಕರವನ್ನು ಯಶಸ್ವಿಗೊಳಿಸಲು ಸಂಯೋಜಿತ ಸಂಘಗಳಿಗೆ ನಿರ್ದೇಶನ ಕೊಡಲು ತೀರ್ಮಾನಿಸಲಾಯ್ತು.

ಸಿ.ಐ.ಟಿ.ಯು. ಸಂದೇಶದ ಮೇ ಸಂಚಿಕೆಯನ್ನು "ಸಿ.ಐ.ಟಿ.ಯು. ಸ್ಥಾಪನಾ ದಿನ" ಸಂಚಿಕೆಯ ವಿಶೇಷ ಸಂಚಿಕೆಯಾಗಿ ಹೊರಡಿಸಲು ತೀರ್ಮಾನಿಸಲಾಯ್ತು.

ಕಾರ್ಖಾನೆಗಳ ಮುಚ್ಚುವಿಕೆ, ಬೀಗ ಮುದ್ರೆಯ ವಿರುದ್ಧ ಮಾರ್ಚ್ 25 ರಿಂದ 31ರವರೆವಿಗೆ ನಡೆಯುತ್ತಿರುವ ಹೋರಾಟದ ಕಾರ್ಯಕ್ರಮ ಯಶಸ್ವಿಗೊಳಿಸಲು ಸಂಘಟನೆಗಳಿಗೆ ಕರೆ ಕೊಟ್ಟಿದೆ.

ಪದಾಧಿಕಾರಿಗಳ ಮುಂದಿನ ಸಭೆಯನ್ನು ಮೇ 23ರಂದು ಮೈಸೂರಿನಲ್ಲಿ ನಡೆಸುವುದೆಂದು ತೀರ್ಮಾನಿಸಲಾಯ್ತು.

ಮುಚ್ಚಿರುವ ಕಾರ್ಖಾನೆಗಳನ್ನು ಪ್ರಾರಂಭಿಸುವಂತೆ ಒತ್ತಾಯಿಸಿ ಧರಣಿ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ 5 ನೇ ರಾಜ್ಯ ಸಮ್ಮೇಳನ ಕರೆಯ ಮೇರೆಗೆ ದಿನಾಂಕ 25 -3-1989ರಂದು ಕೆ.ಪಿ.ಸಿ. ಕಾಂಟ್ರಾಕ್ಟ್ ಕಾರ್ಮಿಕರು ಮತ್ತು ಸ್ಪಿನ್ನಿಂಗ್ ಮಿಲ್ ಕಾರ್ಮಿಕರನ್ನು 50 ಜನ ಮುಂಜಾನೆ 11ರಿಂದ ಸಂಜೆ 5 ರವರೆಗೆ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ಕರ್ನಾಟಕ ವಿದ್ಯುತ್ ನಿಗಮದಲ್ಲಿಯಲ್ಲಿ, ಕಾಂಟ್ರಾಕ್ಟ್ ಪದ್ಧತಿಯ ಶೋಷಣೆಯನ್ನು ನಿಲ್ಲಿಸಿ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ ಅಲ್ಲಿನ ಕಾರ್ಮಿಕರು ಹೋರಾಟದಲ್ಲಿರುವಾಗ ಆಡಳಿತ ವರ್ಗ ಕಾನೂನು ಬಾಹಿರವಾಗಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಬೆದರಿಕೆಯನ್ನು ಒಡ್ಡುತ್ತಿದೆ. ಅದೇ ರೀತಿ ಕಳೆದ ಒಂದೂವರೆ ವರ್ಷದಿಂದ ಸಹಕಾರ ನೂಲಿನ ಗಿರಣಿ ಮುಚ್ಚಿದ್ದು ಕಾರ್ಮಿಕರು ಹಲವಾರು ಬಾರಿ ಮನವಿ ಪತ್ರಗಳನ್ನು ಕೊಟ್ಟರೂ ಕಾರ್ಮಿಕರು ದುಡಿದಿರುವ ಸಂಬಳ ಕೂಡಾ ಕೊಡುತ್ತಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ತೀವ್ರ ಪರಿಹಾರಕ್ಕೆ ಒತ್ತಾಯಿಸಿ ಮನವಿ ಪತ್ರವನ್ನು ಅರ್ಪಿಸಲಾಯಿತು.

ಜಿಲ್ಲಾಧಿಕಾರಿಗಳ ಪರವಾಗಿ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಅವರು ಪ್ರತಿನಿಧಿಗಳೊಂದಿಗೆ ಮಾತನಾಡಿ, ಮುಖ್ಯಮಂತ್ರಿಗಳಿಗೆ ವಿಷಯ ತಿಳಿಸುವುದಾಗಿ ಆಶ್ವಾಸನೆ ಕೊಟ್ಟರು.

ನಂತರ ಕಾರ್ಮಿಕ ಸಭೆಯನ್ನು ಉದ್ದೇಶಿಸಿ ಕಾ|| ಶಾಯಣ್ಣ ಎರಗೇರಾ ಮತ್ತು ಕಾ|| ರಸೂಲ್ ಅಹ್ಮದ್ ಇವರು ಮಾತನಾಡಿದರು.

ದ.ಕ.ಜಿಲ್ಲೆಯಾದ್ಯಂತ ಬೆಲೆಯೇರಿಕೆ ವಿರುದ್ಧ ಪ್ರದರ್ಶನ

ಜನಸಾಮಾನ್ಯರ ದಿನಬಳಕೆ ವಸ್ತುಗಳ ಬೆಲೆಯೇರಿಕೆಯನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಚಳುವಳಿ ನಡೆಸಲು ಹುಬ್ಬಳ್ಳಿಯಲ್ಲಿ ನಡೆದ ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನ ನೀಡಿದ ಕರೆಯಂತೆ ದ.ಕ.ಜಿಲ್ಲೆಯಾದ್ಯಂತ ಮಾರ್ಚ್ 21ರಂದು ಯಶಸ್ವಿಯಾಗಿ ಪ್ರತಿಭಟನಾ ಮೆರವಣಿಗೆ ಧರಣಿ ನಡೆಸಿ ಮನವಿ ಅರ್ಪಿಸಲಾಗಿದೆ.

ಜಿಲ್ಲೆಯ ಮಂಗಳೂರು, ಉಡುಪಿ, ಬಂಟ್ವಾಳಗಳಲ್ಲಿ ಸಾವಿರಾರು ರೈತ-ಕಾರ್ಮಿಕರು ಬೃಹತ್ ರ್‍ಯಾಲಿಗಳನ್ನು ಸಂಘಟಿಸಿದ್ದವು. ಮಂಗಳೂರಿನಲ್ಲಿ ಅಂದು ಹಂಚು, ಬೀಡಿ, ಮೋಟಾರ್ ಸಾರಿಗೆ ಮತ್ತು ಇಂಜಿನಿಯರಿಂಗ್ ಆಟೋರಿಕ್ಷಾ, ಪ್ರೆಸ್ ಕ್ಯಾಶ್ಯುನಟ್ ಮತ್ತಿತರ ಕೈಗಾರಿಕೆಗಳ ಸಹಸ್ರಾರು ಕಾರ್ಮಿಕರು ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆಯಲ್ಲಿ ಬಂದು ಪ್ರದರ್ಶನ ನಡೆಸಿದರು. ಪ್ರತಿಭಟನೆ ಕುರಿತು ಸರ್ಕಾರಕ್ಕೆ ತಿಳಿಸುವುದಾಗಿಯೂ ಹಾಗೂ ಹೋಟೆಲ್ ತಿಂಡಿ ದರ ಏರಿಕೆ ಕುರಿತು ಶೀಘ್ರದಲ್ಲೇ ಹೋಟೆಲ್ ಮಾಲೀಕರು ಕಾರ್ಮಿಕ ಪ್ರತಿನಿಧಿಗಳನ್ನೊಳಗೊಂಡ ತ್ರಿಪಕ್ಷೀಯ ಸಭೆ ಕರೆಯುವುದಾಗಿ ಹಾಗೂ ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದಾಗಿ ಅಧಿಕ್ಯವಾದ ರೇಷನ್ ಅಂಗಡಿ ಮುಚ್ಚದೆ ವಿತರಣಾ ವ್ಯವಸ್ಥೆ ಮಾಡುವುದಾಗಿ ಆಶ್ವಾಸನೆ ನೀಡಿದರು.

ಪ್ರದರ್ಶನ ನಂತರ ಸಭೆಯನ್ನುದ್ದೇಶಿಸಿ, ಜಿಲ್ಲಾ ಅಧ್ಯಕ್ಷ ಕಾ|| ಕೆ.ಮೋಹನ್ನು, ಪ್ರ.ಕಾರ್ಯದರ್ಶಿ ಕಾ|| ಬಿ.ಮಾಧವ, ಕೆ.ಆರ್.ಶ್ರೀಯಾನ್, ಕಮಲಾಕ್ಷ ಬಂಗೇರ, ಕೆ.ಶಂಕರ್, ಯು.ಬಿ.ಲೋಕಯ್ಯ, ಪಿ.ಉಮೇಶ್ ಭಂಡಾರಿ ಹಾಗೂ ಕಾ|| ಶ್ರೀಮತಿ ಪದ್ಮಾವತಿಯವರು ಮಾತನಾಡಿದರು.



ರಾಜ್ಯದ 65 870 ಕಾರ್ಮಿಕರನ್ನು ಸದಸ್ಯರಾಗುಳ್ಳ ಸಿ.ಐ.ಟಿ.ಯು.ನ 5 ನೇ ರಾಜ್ಯ ಸಮ್ಮೇಳನದ ಬಗ್ಗೆ ವರದಿ ಈಗಾಗಲೇ ನೋಡಿದ್ದೀರಿ. ಕರ್ನಾಟಕ ದಲ್ಲಿ ಕಾರ್ಮಿಕ ಆಂದೋಲನದ ಹಾಗೂ ಸಿ.ಐ.ಟಿ.ಯು.ನ ಅಖಿಲ ಭಾರತ ಬೆಳವಣಿಗೆ ಗಳ ಹಿನ್ನೆಲೆಯಲ್ಲಿ ಈ ಸಮ್ಮೇಳನದ ಮಹತ್ವವನ್ನು ಪ್ರಧಾನಕಾರ್ಯದರ್ಶಿ ಕಾ॥ ವಿ.ಜೆ.ಕೆ.ನಾಯರ್ ಇಲ್ಲಿ ವಿಶ್ಲೇಶಿಸಿದ್ದಾರೆ.

ಮಾರ್ಚ್ 5 ರಂದು ಹುಬ್ಬಳ್ಳಿಯಲ್ಲಿ ಕೊನೆಗೊಂಡ ಸಿ.ಐ.ಟಿ.ಯು.ನ 5 ನೇ ರಾಜ್ಯ ಸಮ್ಮೇಳನ ಒಂದು ಗಮನಾರ್ಹ ಸಮ್ಮೇಳನ.

ಈ ಸಮ್ಮೇಳನದ ಮಹತ್ವ ಇರುವುದು ಕೇವಲ ಅದರ ಕಲಾಪಗಳಲ್ಲಿ ಮಾತ್ರವೇ ಅಲ್ಲ. ಚರ್ಚೆಗಳ ಮಟ್ಟ ಹಾಗೂ ಅಂಗೀಕರಿಸಲಾದ ನಿರ್ಣಯಗಳ ದೃಷ್ಟಿಯಿಂದಲೂ ಇದು ಮಹತ್ವ ಪೂರ್ಣ.

ಸಿ.ಐ.ಟಿ.ಯು.ನ 5 ನೇ ಅಖಿಲ ಭಾರತ ಸಮ್ಮೇಳನವಾದಂದಿನಿಂದಲೇ (ಕಾನಪುರ-1983) ಕಾರ್ಮಿಕ ಆಂದೋಲನದಲ್ಲಿ ನಾವು ನೀಡುತ್ತಿದ್ದ ಒತ್ತಿನಲ್ಲಿ ಬದಲಾವಣೆ ಕಂಡು ಬಂತು. ಆರನೇ ಸಮ್ಮೇಳನದ (ಮುಂಬೈ 1987) ನಂತರ ಇದು ಇನ್ನಷ್ಟು ಸ್ಪಷ್ಟಗೊಂಡಿತು.

ಹಿಂದಿನ ಸಮ್ಮೇಳನಗಳಲ್ಲಿ ಪ್ರತಿನಿಧಿಗಳು ಒಬ್ಬೊಬ್ಬರೂ ತಮ್ಮದೇ ಸಂಘಗಳ, ಪ್ರದೇಶಗಳ, ಸಮಸ್ಯೆಗಳ ಕುರಿತಷ್ಟೇ ಮಾತಾಡುತ್ತಿದ್ದರು. ಆದರೆ ಕಾನಪುರ ಸಮ್ಮೇಳನ ಬೇರೆ ರೀತಿಯಲ್ಲೇ ನಡೆಯಿತು. ಪ್ರತಿನಿಧಿಗಳು ತಮ್ಮೆದುರು ಮಂಡಿಸಲ್ಪಟ್ಟ ಪ್ರಶ್ನೆಗಳ ಮೇಲೆ ಮಾತನಾಡಬೇಕೆಂದು ಸಿ.ಐ.ಟಿ.ಯು. ಮುಖಂಡತ್ವ ನಿರೀಕ್ಷಿಸಿತು.

ಈಗ ಸಿ.ಐ.ಟಿ.ಯು. ಪ್ರತಿನಿಧಿಗಳು ತಮ್ಮ ಕರ್ತವ್ಯಗಳ ಬಗ್ಗೆ ತಕ್ಕಮಟ್ಟಿನ ಜ್ಞಾನ ಗಳಿಸಿದ್ದಾರೆ. ಮೊತ್ತ ಮೊದಲನೆಯದಾಗಿ ಕಾರ್ಮಿಕ ವರ್ಗದ ಐಕ್ಯತೆಯ ಬಗ್ಗೆ. ಆರನೇ ಸಮ್ಮೇಳನ ಈ ಪ್ರಶ್ನೆಯ ಮೇಲೆ ಸಾಕಷ್ಟು ಸಮಯ ಮೀಸಲಿಟ್ಟಿತು. ಇದೇ ರೀತಿ ಈ ಅಖಿಲ ಭಾರತ ಸಮ್ಮೇಳನ ಅಸಂಘಟಿತರನ್ನು ಸಂಘಟಿಸಿ ಕಾರ್ಮಿಕ ಆಂದೋಲನವನ್ನು ವಿಸ್ತರಿಸುವ, ಕ್ಲೋಶರ್, ರಿಟ್ರೆಂಚ್‌ಮೆಂಟ್‌ಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಿಕೊಳ್ಳುವ, ಮಹಿಳಾ ಕಾರ್ಮಿಕರ, ನಿರುದ್ಯೋಗಿಗಳ ಮತ್ತು ಯುವ ಕಾರ್ಮಿಕರ ಪ್ರಶ್ನೆಗಳನ್ನು ಎತ್ತಿಕೊಳ್ಳುವ ಧೋರಣೆಗಳನ್ನು ರೂಪಿಸಿತು.

6ನೇ ಅಖಿಲ ಭಾರತ ಸಮ್ಮೇಳನದ ನಂತರ ಮುಂದುವರಿದ ರಾಜ್ಯಗಳಲ್ಲಿ ಸಿ.ಐ.ಟಿ.ಯು.ನ ಗಮನಾರ್ಹ ಬೆಳವಣಿಗೆ ಕಂಡು ಬಂದಿದೆ. ಉತ್ತರದ ರಾಜ್ಯಗಳಲ್ಲಿಯೂ ಅಸಂಘಟಿತರು, , ಸರ್ಕಾರಿ ನೌಕರರು ಮುಂತಾದ ವಲಯಗಳಲ್ಲಿ ಹೊಸ ಅವಕಾಶಗಳು ಕಂಡು ಬಂದವು.

ಸಿ.ಐ.ಟಿ.ಯು. ಸಂಘಟನೆ ಆದಾಗಲೇ ಮುಂದುವರಿದಿದ್ದ ರಾಜ್ಯಗಳಲ್ಲಿ ಈ ಎಲ್ಲಾ ಬದಲಾವಣೆಗಳಾಗುತ್ತಿದ್ದಾಗ ನಾವು ನಿಧಾನವಾಗಿ ಮುನ್ನಡೆಯುತ್ತಿದ್ದೆವು.

ನಮ್ಮ ರಾಜ್ಯದಲ್ಲಿನ ಸಿ.ಐ.ಟಿ.ಯು. ಬೆಳವಣಿಗೆಗೂ ಸರ್ವಾಧಿಕಾರದ ವಿರುದ್ಧ ಹೋರಾಟದ ರಾಜಕೀಯ ಧೋರಣೆಗೂ ನೇರ ಸಂಬಂಧವಿತ್ತು. ತುರ್ತುಪರಿಸ್ಥಿತಿಯ ನಂತರದ ಈ ಹೋರಾಟ, ಜತೆಗೆ ತಾವು ಪ್ರಬಲರೆಂದು ಹೇಳಿಕೊಳ್ಳುತ್ತಿದ್ದ ಎ.ಐ.ಟಿ.ಯು.ಸಿ.ಯ ವರ್ಗ ಶಾಮೀಲಿನ ಧೋರಣೆಯ ವಿರುದ್ಧ ಹೋರಾಟದಿಂದ ನಾವು ಬೆಳೆಯುವಂತಾಯಿತು. ಹಿಂದೆ ಅತ್ಯಂತ ಸೋಮಾರಿತನದಿಂದ ನಡೆಯುತ್ತಿದ್ದ ಈ ಸಂಘಗಳ ಹತೋಟಿ ಪಡೆದು ಅವಕ್ಕೊಂದು ಸ್ಥಿರತೆ ಕೊಡುವ ನಮ್ಮ ಪ್ರಯತ್ನಗಳಿಂದಾಗಿ ನಾವು ವ್ಯಾಪಕವಾಗಿ ಹರಡುವುದು ಸಾಧ್ಯವಾಯಿತು. ಆದರೆ ಅದೇ ವೇಳೆಗೆ ರಾಜ್ಯದಲ್ಲಿ ಕಾರ್ಮಿಕ ಆಂದೋಲನ ಯೋಜನಾಬದ್ಧ ಮಾರ್ಗದರ್ಶನ ನೀಡುವ ಒಂದು ಕೇಂದ್ರೀಕೃತ ಮುಖಂಡತ್ವ ನೀಡಲು ನಮಗೆ ಸಾಧ್ಯವಾಗಲಿಲ್ಲ.

> ಸಿ.ಐ.ಟಿ.ಯು. ನೇತೃತ್ವವಿಲ್ಲದೆ ಐಕ್ಯ ಕಾರ್ಯಾಚರಣೆಗೆ ಆಗಾಗ ಕಷ್ಟವಾದುದುಂಟು. ಎಲ್ಲೆಡೆಗಳಲ್ಲೂ ಇದು ನಮ್ಮ ಅನುಭವ. ಆದುದರಿಂದ ನಿಮ್ಮ ಸ್ವಾತಂತ್ರ ಕಾರ್ಯಾಚರಣೆಯ ಪಾತ್ರ ಮತ್ತು ನಿಮ್ಮ ನಾಯಕತ್ವದ ಪ್ರಾಮುಖ್ಯತೆಯನ್ನು ನೀವೆಲ್ಲರೂ ನೆನಪಿಸುವುದು ಅಗತ್ಯವಿದೆ.
>
> -ಬಿ.ಟಿ.ಆರ್

ನಮ್ಮ ಕಾರ್ಖಾನೆ ಮಟ್ಟದ ಮುಖಂಡರುಗಳ ಪ್ರಜ್ಞೆ ಬಹಳ ಹಿಂದೆ ಬಿದ್ದಿತ್ತು. ಇದು ರಾಜ್ಯ ಮುಖಂಡತ್ವವನ್ನು ಹಿಂದಕ್ಕೆ ಜಗ್ಗುತ್ತಿತ್ತು. ಕಾರ್ಖಾನೆ ಮಟ್ಟದ ಮುಖಂಡರು ವ್ಯಾಪಕವಾದ ಪ್ರಶ್ನೆಗಳನ್ನು ಎತ್ತಿಕೊಳ್ಳುವಲ್ಲಿ ಅಥವಾ ಕೆಲವೇ ನಿರ್ದಿಷ್ಟ ಯೂನಿಯನ್‌ಗಳಲ್ಲೇ ರಾಜ್ಯ ಮುಖಂಡರು ಸಿಲುಕಿರುವಂತಹ ಪರಿಸ್ಥಿತಿಯಿಂದ ಅವರನ್ನು ಮುಕ್ತಗೊಳಿಸುವಲ್ಲಿ ಯಾವುದೇ ಆಸಕ್ತಿ ತೋರುತ್ತಿರಲಿಲ್ಲ.

ಈ ದೃಷ್ಟಿಯಿಂದ ನೋಡಿದಾಗ ನಮಗೆ 5 ನೇ ರಾಜ್ಯ ಸಮ್ಮೇಳನ ಸ್ವಲ್ಪ ನಿರೀಕ್ಷೆ ಮೂಡಿಸಿದೆ. ಸಮ್ಮೇಳನದಲ್ಲಿ ಮಾತನಾಡಿದವರಲ್ಲಿ ಹೆಚ್ಚಿನವರು ಕಾರ್ಖಾನೆ ಮಟ್ಟದ ಪ್ರಜ್ಞೆಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ ಕಾ॥ ಬಿ.ಟಿ.ಆರ್. ಮತ್ತು ರಾಜ್ಯ ಮುಖಂಡತ್ವ ಅವರ ಮುಂದಿಟ್ಟ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ದೇಶದ ಐಕ್ಯತೆ, ಸಮಗ್ರತೆಯನ್ನು ಕಟ್ಟುವ ಸರ್ಕಾರದ ನಕಾರಾತ್ಮಕ ಧೋರಣೆಗಳ ವಿರುದ್ಧ, ಕೈಗಾರಿಕೀಕರಣದ ಬುಡವನ್ನೇ ಕಟ್ಟುವ ಹೊಸ ಆರ್ಥಿಕ ನೀತಿಯ ವಿರುದ್ಧ ಹೋರಾಡದೇ ನಾವು ಬೆಳೆಯುವುದು ಸಾಧ್ಯವಿಲ್ಲವಷ್ಟೇ ಅಲ್ಲ, ಈಗಿನ ಪ್ರಭಾವವನ್ನು ಕೂಡಾ ಉಳಿಸಿಕೊಳ್ಳುವುದು ಕಷ್ಟ ಎಂಬುದನ್ನು ಪ್ರತಿನಿಧಿಗಳು ಗಮನಿಸಿದರು.

ಈ ಸಮ್ಮೇಳನ ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲೆಂದೇ ಎರಡು ಗಂಟೆಗಳನ್ನು ಪೂರ್ಣವಾಗಿ ಮೀಸಲಿಡುವುದು ಸಾಧ್ಯವಾಯಿತು. ಇದೊಂದು ಸ್ವಾಗತಾರ್ಹ ಬೆಳವಣಿಗೆ.

ನಿರ್ಣಯಗಳನ್ನು ಸಿದ್ಧಪಡಿಸಿ, ಎಲ್ಲರಿಗೂ ತಲುಪಿಸಿ, ಮಂಡಿಸಿ, ಬೆಂಬಲಿಸುವಲ್ಲಿಯೂ, ಅವುಗಳ ಮೇಲೆ ಸಾಕಷ್ಟು ಉತ್ತಮವಾಗಿ ನಡೆದ ಚರ್ಚೆಗಳಲ್ಲಿಯೂ ಕಂಡುಬಂದ ಆಸಕ್ತಿಯಿಂದಾಗಿ ಇವು ಕೇವಲ ಸಾಂಕೇತಿಕ ನಿರ್ಣಯಗಳಾಗಿ ಉಳಿಯಲಿಲ್ಲ.

ಹತ್ತು ವರ್ಷಗಳ ಹಿಂದೆ ನಾವು ಬೆಳೆಯಲಾರಂಭಿಸಿದಾಗ ನಮಗೆ ಮಾರ್ಗದರ್ಶಕವಾಗಿದ್ದದ್ದು ನಮ್ಮ ಸಂಘಟನೆಯನ್ನು ಹೊಸ ಪ್ರದೇಶಗಳಿಗೆ ವಿಸ್ತರಿಸುವ ಆವಶ್ಯಕತೆ. ಇದರಿಂದ ಹಿಂದುಳಿಕೆಯನ್ನು ನಿವಾರಿಸಿ, ಎಲ್ಲೆಡೆಯೂ ನಮ್ಮ ಗಮನಾರ್ಹ ಅಸ್ತಿತ್ವ ಕಂಡು ಬರುವಂತೆ ಮಾಡಿ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನ ವ್ಯಾಪಕ ಪ್ರಮಾಣದಲ್ಲಿ ಬೆಳೆಯುವಂತೆ ಮಾಡಲು ಇದು ಅಗತ್ಯವಾಗಿತ್ತು. ಈ ಗುರಿ ಸಾಧಿಸಿದ್ದೇವೆಂದು ನಾವು ಸಾಕಷ್ಟು ತೃಪ್ತಿಪಟ್ಟುಕೊಳ್ಳಬಹುದು.

> ಸ್ವಾತಂತ್ರ ದೊರಕಿ 40 ವರ್ಷಗಳ ನಂತರದ ಈ ದಿನಗಳಲ್ಲಿ ಟ್ರೇಡ್ ಯೂನಿಯನ್ ಆಂದೋಲನ ಹಳೆಯ ಮಾದರಿಯಂತೆ ಕೇವಲ ಆರ್ಥಿಕ ಹೋರಾಟಗಳಿಗೆ ಮಾತ್ರ ಸೀಮಿತವಾಗಿ ಮುಂದುವರಿಯುವುದು ಅಸಾಧ್ಯ. ದೇಶ ಮತ್ತು ಜನಸಾಮಾನ್ಯರು ಇಂದು ಎದುರಿಸುತ್ತಿರುವ ಬೃಹತ್ ಸಮಸ್ಯೆಗಳು ಟ್ರೇಡ್ ಯೂನಿಯನ್ ಆಂದೋಲನದ ಸಮಸ್ಯೆಗಳಾಗಿ ಈಗ ಪರಿಣಮಿಸಿವೆ.
>
> -ಬಿ.ಟಿ.ಆರ್.

ಆದರೆ ಕಳೆದ ಹತ್ತು ವರ್ಷಗಳ ಬೆಳವಣಿಗೆಯ ಬಗ್ಗೆ ಇತ್ತೀಚಿನ ಒಂದು ವಿಶ್ಲೇಷಣೆಯನ್ನು ನೋಡಿದಾಗ ಆದಾಗಲೇ ಬಲವಾಗಿದ್ದ ರಾಜ್ಯಗಳಲ್ಲಿ, ಉದಾ: ಪಶ್ಚಿಮಬಂಗಾಳ, ಕೇರಳಗಳಲ್ಲಿ ಬೆಳವಣಿಗೆ ಹೊಂದಿರುವಂತೆ ಕಂಡರೂ, ಇತರ ಪ್ರದೇಶಗಳಲ್ಲಿ ಅದೇ ವೇಗದಲ್ಲಿ ಬೆಳೆದಿಲ್ಲ ಎಂದು ಕಂಡುಬರುತ್ತದೆ. ಇದರಿಂದ ಬೆಳವಣಿಗೆ ಹೊಂದಿದ ಮತ್ತು ಹಿಂದುಳಿದ ಪ್ರದೇಶಗಳ ನಡುವಿನ ಅಂತರ ಇನ್ನಷ್ಟು ಹೆಚ್ಚಿದೆ.

1970ರಲ್ಲಿ ಸಿ.ಐ.ಟಿ.ಯು. ಸಂಘಟನೆಯಾದಾಗ ನಾವು ಅಖಿಲಭಾರತ ಮಟ್ಟದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದೆವು. ಈಗ ನಾವು ಅದಕ್ಕಿಂತ ಕೆಳಕ್ಕಿಳಿದಿದ್ದೇವೆ. ಪಶ್ಚಿಮಬಂಗಾಳ, ಕೇರಳದಲ್ಲಿ ಸಿ.ಐ.ಟಿ.ಯು. ಸದಸ್ಯತ್ವ ಮೂರು-ನಾಲ್ಕು



ಜನಗಳ ಸಮಸ್ಯೆ… ಕಾರ್ಮಿಕ ವರ್ಗ…

ಎಂಬ ವಿಶ್ವಾಸ ಮೂಡಿಸಿ…



ಸಮಾಜವಾದದ ಗುರಿಯನ್ನು ಎತ್ತಿ ಹಿಡಿದು ಸಮಾಜವನ್ನು ಎಲ್ಲಾ ಶೋಷಣೆಯಿಂದ ಸಂಪೂರ್ಣವಾಗಿ ವಿಮೋಚನೆಗೊಳಿಸಲು ಸಿ.ಐ.ಯು. ಬದ್ಧವಾಗಿದೆ ಎಂದು ಸಿ.ಐ.ಟಿ.ಯು. ಸಂವಿಧಾನ ಹೇಳುತ್ತದೆ. ಆದ್ದರಿಂದ ಸಮಾಜದಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಸಂಘಟಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳಿಗೆ ವಿಶೇಷ ಆದ್ಯತೆ ನೀಡಿ ಅವರನ್ನು ಉತ್ತಮ ಸಂಘಟಕರನ್ನಾಗಿ ತರಬೇತು ನೀಡಬೇಕಾಗಿದೆ- ಇದು ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನದ ಅಂಗವಾಗಿ ನಡೆದ ದುಡಿಯುವ ಮಹಿಳೆಯರ ಅಧಿವೇಶನದ ಒಕ್ಕೊರಲಿನ ಕರೆ.

ಸಮ್ಮೇಳನದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿ 2 ಘಂಟೆ ಕಾಲಾವಕಾಶವನ್ನು ಮೀಸಲಾಗಿರಿಸಲಾಗಿತ್ತು.

"ದುಡಿಯುವ ಮಹಿಳೆಯರ"

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಎಂ.ಎಂ.ರಾಜಮ್ಮ ಮೊದಲು ಮಾತನಾಡುತ್ತಾ ಕಳೆದ ಸಮ್ಮೇಳನಕ್ಕಿಂತ ಹೆಚ್ಚು ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಮಹಿಳೆಯರೇ ಜಾಸ್ತಿಯಾಗಿ ಕೆಲಸ ಮಾಡುತ್ತಿರುವ ಬೀಡಿ, ಪ್ಲಾಂಟೇಶನ್‌ಗಳಲ್ಲಿ ಕನಿಷ್ಠ ಸೌಲಭ್ಯಗಳಾದ ಬಾಲವಾಡಿ, ಶೌಚಾಲಯಗಳು ದೊರೆಯುತ್ತಿಲ್ಲ. ಮಹಿಳೆಯರು ಎಷ್ಟೇ ಪ್ರಾಮಾಣಿಕವಾಗಿ ದಕ್ಷತೆಯಿಂದ ಕೆಲಸ ಮಾಡಿದರೂ ಎಲ್ಲಾ ದಾಳಿಗಳಿಗೆ ಅವರೇ ಮೊದಲು ಬಲಿಯಾಗುತ್ತಾರೆ. ಆದ್ದರಿಂದ ದುಡಿಯುವ ಮಹಿಳೆಯರನ್ನು ಹೆಚ್ಚು ಹೆಚ್ಚಾಗಿ ಸಂಘಟಿಸಬೇಕು. ಅವರನ್ನು ನಾಯಕತ್ವದಲ್ಲಿ ಬರುವಂತೆ ಮಾಡಬೇಕು. ಈ ದಿಸೆಯಲ್ಲಿ ಸಿ.ಐ.ಟಿ.ಯು. 1973 ರಿಂದೀಚೆಗೆ ಸತತವಾಗಿ ಪ್ರಯತ್ನ ನಡೆಸುತ್ತಿದ್ದು 1979ರ ಮದ್ರಾಸ್ ಸಮ್ಮೇಳನದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಅಧಿವೇಶನ ನಡೆಸಿತ್ತು ಎನ್ನುವುದನ್ನು ಜ್ಞಾಪಿಸಿಕೊಟ್ಟರು.

ರಾಜೀವ್‌ಗಾಂಧಿ ಸರ್ಕಾರವು ಚುನಾವಣೆಯ ದೃಷ್ಟಿಯಿಂದ ಮಹಿಳೆಯರಿಗಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ, ಮಹಿಳೆಯರ ಇಂದಿನ ದುಃಸ್ಥಿತಿಗೆ ಅವರ ಕಾಂಗ್ರೆಸ್ ಪಕ್ಷವೇ ಕಾರಣ ಎಂಬುದನ್ನು ಮನಗಂಡು, ಅರ್ಧದಷ್ಟು ಸಂಖ್ಯೆಯಲ್ಲಿರುವ ಮಹಿಳೆ



ಪಟ್ಟು ಏರಿದೆ. ನಮ್ಮಲ್ಲಿನ ಸದಸ್ಯತ್ವ ಇನ್ನೂ ದ್ವಿಗುಣಗೊಂಡಿಲ್ಲ.

ಅಖಿಲ ಭಾರತ ಧೋರಣೆಯನ್ನು ಜ್ಯಾರಿಗೊಳಿಸಿದ್ದರಿಂದ ಈ ಮುಂದುವರಿದ ರಾಜ್ಯಗಳು ಅಪಾರ ಬೆಳವಣಿಗೆ ಸಾಧಿಸಿದವು. ಹೊಸ-ಹೊಸ ವಿಭಾಗಗಳನ್ನು ಅವು ಸಂಘಟನೆಯೊಳಗೆ ತಂದವು. ನಾವು ಆರನೇ ಅಖಿಲ ಭಾರತ ಸಿ.ಐ.ಟಿ.ಯು. ಸಮ್ಮೇಳನದ ನಂತರ ಕೂಡಾ ಅಸಂಘಟಿತರನ್ನು ಸಂಘಟಿಸುವ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ಸಫಲರಾಗಲಿಲ್ಲ.

ವಿವಿಧ ಕಾರ್ಯಾಚರಣೆಗಳಿಗೆ ಸಮ್ಮೇಳನ ಕೊಟ್ಟ ಕರೆ ಮಹತ್ವಪೂರ್ಣ. ಮಾರ್ಚ್ 21ರಂದು ಬೆಲೆಯೇರಿಕೆ ವಿರುದ್ಧ. ಮಾರ್ಚ್ 25 ರಿಂದ 31ರವರೆಗೆ ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯುವಂತೆ ಒತ್ತಾಯಿಸಲು ವಾರಾಚರಣೆ. ಕಾಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಬೇಕೆಂದು ಒತ್ತಾಯಿಸಿ ಬೀಡಿ ಉದ್ದಿಮೆಯಲ್ಲಿ ಏಪ್ರಿಲ್ 18ರಂದು ಮುಷ್ಕರ ಮತ್ತು ಇ.ಎಸ್.ಐ. ಸರಿಪಡಿಸಲು ಒತ್ತಾಯಿಸಿ ಚಳುವಳಿಗೆ ಕರೆ- ಇವೆಲ್ಲಾ ಸಮ್ಮೇಳನ ರೂಪಿಸಿದ ಮಹತ್ವಪೂರ್ಣ ಕಾರ್ಯಾಚರಣೆಗಳು.

> ಇಡೀ ಕಾರ್ಮಿಕ ಸಂಘಟನೆಗಳ ಹೋರಾಟ ಒಂದಾಗಿ ದುಡಿಯುವ ವರ್ಗದ ಐಕ್ಯ ಹೋರಾಟವಾಗಿ ಮೂಡಿಬಂದು ಕಾಂಗ್ರೆಸ್(ಐ) ದುರಾಡಳಿತದ ವಿರುದ್ಧ ಜಾತ್ಯಾತೀತ ವಿರೋಧ ಪಕ್ಷಗಳ ಹಾಗೂ ಎಡ ಪಕ್ಷಗಳ ಸಾಮೂಹಿಕ ಹೋರಾಟ ವನ್ನು ಬೆಂಬಲಿಸುವಲ್ಲಿ, ಎಲ್ಲಕ್ಕೂ ಮಿಗಿಲಾಗಿ ಭಾರತದ ಹಳ್ಳಿಗಾಡಿನ ಜನತೆಯ ಹಾಗೂ ದುಡಿಯುವ ವರ್ಗದ ಮೂಲ ಭೂತ ಬೇಡಿಕೆಗಳ ಹೋರಾಟದ ನೇತೃತ್ವ ವಹಿಸಬೇಕಾಗಿದೆ.
>
> -ಬಿ.ಟಿ.ಆರ್.



ಯುವುದು ಸಾಧ್ಯ.

ನಮ್ಮ ಸಂಗಾತಿಗಳು ಕಾರ್ಖಾನೆ ಮಟ್ಟದ ಪ್ರಜ್ಞೆಯಿಂದ ಮೇಲೆದ್ದು ಕನಿಷ್ಠ ಪಕ್ಷ ಉದ್ದಿಮೆ ಮಟ್ಟದ ಪ್ರಜ್ಞೆಯನ್ನಾದರೂ ಬೆಳೆಸಿಕೊಳ್ಳಬೇಕು. ಈ ಮಟ್ಟದಲ್ಲಿ ಸಂಘಟನೆ ಸಾಧಿಸುವಂತಾಗಬೇಕು.

ಸಮ್ಮೇಳನ ನಡೆದ ಸ್ಥಳ ಮತ್ತು ಸಂಘಟನೆ ಬಗ್ಗೆ ಒಂದು ಮಾತು. ಹುಬ್ಬಳ್ಳಿ-ಧಾರವಾಡದಲ್ಲಿ ಸಂಘಟನೆ ಸಂಖ್ಯೆಯ ದೃಷ್ಟಿಯಿಂದ ಬಹಳ ಗಟ್ಟಿಯಾಗೇನಿಲ್ಲ. ಆದರೂ ಅಲ್ಲಿನ ಸಂಗಾತಿಗಳು ಧೈರ್ಯದಿಂದ ಕೆಲಸ ಮಾಡಿದರು. ಸುತ್ತಮುತ್ತಲಿನ ಹರಿಹರ, ದಾಂಡೇಲಿ, ಬೆಳಗಾಂ, ಬಾಗಲಕೋಟೆ ಮುಂತಾದೆಡೆಗಳಿಂದ ಬೆಂಬಲ ಸಂಘಟಿಸಿ ಅತ್ಯಂತ ಕಡಿಮೆ ಸಮಯದಲ್ಲೇ ಸಮ್ಮೇಳನದ ಸಿದ್ಧತೆ ಪೂರೈಸಿದರಷ್ಟೇ ಅಲ್ಲ. ಸಿ.ಐ.ಟಿ.ಯು. ಒಟ್ಟು ಸದಸ್ಯತ್ವ ಒಂದು ಸಾವಿರದಷ್ಟು ಮಾತ್ರವೇ ಇದ್ದರೂ ಪ್ರತಿಯೊಂದು ಕೆಲಸವನ್ನು ಯಶಸ್ವಿಯಾಗಿ ಪೂರೈಸಿದರು. ಹಿಂದುಳಿದ ಪ್ರದೇಶಗಳಿಗೂ ಸಿ.ಐ.ಟಿ.ಯು. ಸಂದೇಶ ಒಯ್ಯುವಲ್ಲಿ ಸಫಲರಾದರು. ಇದನ್ನು ಹೇಳುತ್ತಿರುವುದು ಕೇವಲ ನಮ್ಮ ಬೆನ್ನ ತಟ್ಟಿಕೊಳ್ಳಲು ಅಲ್ಲ; ಇನ್ನೂ ಹಲವು ಪಟ್ಟಣಗಳಲ್ಲಿ, ಪ್ರದೇಶಗಳಲ್ಲಿ ಕೂಡಾ ಇದೇ ರೀತಿ ಅಪಾರ ಸಾಧ್ಯತೆಗಳಿವೆ ಎಂಬುದತ್ತ ಗಮನ ಸೆಳೆಯುವುದಕ್ಕಾಗಿ ಈ ಮಾತು. ಜನ ಭ್ರಮನಿರಸನಗೊಳ್ಳುತ್ತಿರುವಾಗ ನಾವು ... ಜನ ಮುನ್ನಡೆಯುತ್ತಿದ್ದಾರೆ, ನಾವು ಅವರನ್ನು ಸಂಘಟಿಸಿದರೆ ಖಂಡಿತಾ ನಮ್ಮನ್ನು ಅನುಸರಿಸುತ್ತಾರೆ ಎಂಬ ವಿಶ್ವಾಸ ನಮ್ಮಲ್ಲಿ ಇರಬೇಕಷ್ಟೆ.

ಕಾಂಗ್ರೆಸ್ ಪಕ್ಷ ಮತ್ತು ಇತರ ಬೂರ್ಜ್ವಾ ಪಕ್ಷಗಳ ಆಳ್ವಿಕೆಯಿಂದ ಜನ ನಮ್ಮ ಸಮರ್ಪಣಾಭಾವದ ಕೆಲಸಗಳ ಮೂಲಕ ಅವರನ್ನು ಈಗ ಕಾಡುತ್ತಿರುವ ಪ್ರತಿಯೊಂದು ಪ್ರಶ್ನೆಗಳ ಮೇಲೆ ಕಾರ್ಮಿಕ ವರ್ಗದ ಪರ್ಯಾಯವನ್ನು ತೋರಿಸಬಹುದು ಎನ್ನುವುದು ಈ ಸಮ್ಮೇಳನದ ಯಶಸ್ಸಿನ ರಾಜಕೀಯ ಅಂಶ.

> ## ಸ್ವಾಗತ ಸಮಿತಿಯ ಅಭಿನಂದನೆ
>
> ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನ ಮಾರ್ಚ್ 2ರಿಂದ 5 ರವರೆಗೆ ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನೆರವೇರಲು ಸರ್ವ ರೀತಿಯಲ್ಲೂ ಸಹಾಯ ಸಹಕಾರ ನೀಡಿ ಯಶಸ್ವಿಗೊಳಿಸಲು ಸಹಕರಿಸಿದ ಕಾರ್ಮಿಕರು ಸಾರ್ವಜನಿಕರು, ವ್ಯಾಪಾರೋದ್ಯಮಿಗಳು ಹಾಗೂ ಕಾರ್ಯಕರ್ತರಿಗೆ ಸಿ.ಐ.ಟಿ.ಯು. ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ|| ಎಂ.ಬಿ.ಕಟ್ಟಿ, ಸಂಘಟನಾ ಕಾರ್ಯದರ್ಶಿ ಕಾ|| ವಿ.ಎಂ. ಪುಜಾರ ಅವರು ಅಭಿನಂದನೆ ಸಲ್ಲಿಸಿದ್ದಾರೆ.

...ಪರಿಹಾರಕ್ಕೆ ...ಪರ್ಯಾಯ ಸಾಧ್ಯ

...ಐ.ಟಿ.ಯು. ಸಮ್ಮೇಳನ



ಒಂದೆರಡು ಕಾರ್ಖಾನೆಗಳಲ್ಲದೆ ಇಡೀ ಉದ್ದಿಮೆಗೆ ಅನ್ವಯಿಸುವ ಪ್ರಶ್ನೆಗಳನ್ನು ರೂಪಿಸಿ, ಅದನ್ನು ಪ್ರಚಾರ ಮಾಡಿ, ಚಳುವಳಿ ನಡೆಸಿ ಉದ್ದಿಮೆವಾರು ಸಂಘಟನೆ ಮಾಡಿದಾಗ ಮಾತ್ರವೇ ಇದು ಸಾಧ್ಯ.

5 ನೇ ರಾಜ್ಯ ಸಮ್ಮೇಳನದ ಕಲಾಪಗಳನ್ನು ನೋಡಿದಾಗ ಪ್ರತಿನಿಧಿಗಳಿಗೆ ಇದರ ಅರಿವು ಇದೆ ಎಂಬುದರ ಲಕ್ಷಣಗಳು ಕಂಡು ಬಂದವು. ಹೊಸದಾಗಿ ಚುನಾಯಿತ ಮುಖಂಡತ್ವ ಈ ಪ್ರಶ್ನೆಗಳನ್ನು ಗುರುತಿಸಿ ಆಂದೋಲನಕ್ಕೆ ಮಾರ್ಗದರ್ಶನ ನೀಡುವಲ್ಲಿ ಯಶಸ್ವಿಯಾಗಬೇಕು.

ನಾವು ಈಗಾಗಲೇ ಸಾಕಷ್ಟು ವಿಸ್ತಾರಗೊಂಡಿದ್ದೇವೆ. ಈಗ ಹಲವಾರು ಸಂಘಗಳ ಚಟುವಟಿಕೆಗಳನ್ನು ಗಿರಣಿ ವಲಯದಲ್ಲಿ, ಇಂಜಿನಿಯರಿಂಗ್, ಪ್ಲೈವುಡ್, ಬೀಡಿ, ಪ್ಲಾಂಟೇಷನ್ ಮುಂತಾದ ಉದ್ದಿಮೆಗಳಲ್ಲಿ ಸಂಯೋಜಿಸಬೇಕಾದ ಸಮಯ ಬಂದಿದೆ. ಉದ್ದಿಮೆವಾರು ಸಮಸ್ಯೆಗಳ ಮೂರ್ತ ಅಧ್ಯಯನಗಳಿಂದ ಅಪೇಕ್ಷಿತ ಫಲಿತಾಂಶ ದೊರೆ

> ಸಿ.ಐ.ಟಿ.ಯು. ನೇತೃತ್ವದ ಸಂಘಟನೆಗಳು ದುಡಿಯುವ ವರ್ಗದ ಹಿತವು ದೇಶದ ಐಕ್ಯತೆಯ ಹಿತಕ್ಕಿಂತ, ಸಮಗ್ರ ಜನತೆಯ ಹಿತಗಳಿಗಿಂತ ಭಿನ್ನವಾಗಿರಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಸಂಪೂರ್ಣವಾಗಿ ಅರಿತುಕೊಂಡೇ ಕಾರ್ಯ ನಿರ್ವಹಿಸುತ್ತಾ ಬಂದಿವೆ.
>
> – ಬಿ. ಟಿ. ರಣದಿವೆ.
> ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ

ಸಮ್ಮೇಳನದಲ್ಲಿ ನಾವು ಅಂಗೀಕರಿಸಿದ ನಿರ್ಣಯಗಳ ಹಾಗೂ ಠರಾವುಗಳ ಎಲ್ಲಾ ಅಂಶಗಳನ್ನು ಜನರ ನಡುವೆ ನಾವು ಒಯ್ಯುವುದಾದರೆ ತ್ವರಿತವಾಗಿ ಮುನ್ನಡೆಯುವುದು ನಮಗೆ ಸಾಧ್ಯ.

ಈಗ ಎಲ್ಲಾ ಹಂತಗಳಲ್ಲೂ ನಮ್ಮ ಪ್ರತಿಯೊಬ್ಬ ಸಂಗಾತಿಯೂ ನಮ್ಮ ಧೋರಣೆಗಳನ್ನು ಅವಿಶ್ರಾಂತವಾಗಿ ದುಡಿಯಬೇಕಾಗಿದೆ. ನಮ್ಮ ಧೋರಣೆಗಳನ್ನು ಮುಂದೊಯ್ಯಬೇಕಾಗಿದೆ.

...ಸಮಸ್ಯೆಗಳಿಗೆ ಆದ್ಯತೆ ನೀಡಿ”

ಯರನ್ನು ಸಂಘಟಿಸಿ ರಾಜೀವ್ ಸರ್ಕಾರವನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಬೇಕಾಗಿದೆ ಎಂದರು.

ಬೆಂಗಳೂರಿನಿಂದ ಕುರ್ಷಿದಾಬೇಗಂ, ಭಾಗ್ಯ, ದ.ಕ. ಜಿಲ್ಲೆಯಿಂದ ಕಮಲಾಕ್ಷಿ, ಗುಲಾಬಿ, ಪಾರ್ವತಿ, ಪದ್ಮಾವತಿ (ರಾಜ್ಯೀಯ ಮಂಡಳಿ ಸದಸ್ಯೆ) ವಾರಿಜ, ಹಾಸನದಿಂದ ಪುಷ್ಪ, ವಾರಿಜ, ಕುಟ್ಟಮ್ಮ ಶಿವಮೊಗ್ಗದಿಂದ ಭಾಗ್ಯಮ್ಮ, ಮತ್ತು ಮೂವರು ಪುರುಷ ಪ್ರತಿನಿಧಿಗಳು ಮಾತನಾಡಿ ತಮ್ಮ ತಮ್ಮ ಕ್ಷೇತ್ರದ ಅನುಭವಗಳನ್ನು ತಿಳಿಸಿ, ಸಿ.ಐ.ಟಿ.ಯು. ಸಂಘದ ಆಶ್ರಯದಲ್ಲಿ, ದುಡಿಯುವ ಮಹಿಳೆಯರನ್ನು ಸಂಘಟಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುವುದಾಗಿ ಘೋಷಿಸಿದರು.

ಅವಕಾಶವನ್ನು ಒದಗಿಸಿ ಹುರಿದುಂಬಿಸಿದಲ್ಲಿ, ಮಹಿಳೆಯರೂ ಸಹ ಉತ್ತಮ ಸಂಘಟಕರಾಗಬಲ್ಲರು, ನಾಯಕತ್ವವನ್ನು ನೀಡಬಲ್ಲರು ಎನ್ನುವುದಕ್ಕೆ ಮಹಿಳಾ ಅಧಿವೇಶನ ಸಾಕ್ಷಿಯಾಗಿತ್ತು.

ಹಿಂದುಳಿದ ಪ್ಲಾಂಟೇಶನ್ ಪ್ರದೇಶದಿಂದ ಬಂದ ಅವಿದ್ಯಾವಂತ ಹರಿಜನ ಮಹಿಳೆಯೊಬ್ಬರು ಕೆಲಸ ಮಾಡುವ ಪ್ರದೇಶದಲ್ಲಿ, ಮಾಲೀಕರಿಂದ ಅವರ ಏಜೆಂಟರಿಂದ ಬೈಗಳು, ಧಾಳಿ, ಕಡಿಮೆ ಕೂಲಿ, ಮನೆಯಲ್ಲಿ ಮಕ್ಕಳ ಲಾಲನೆ, ಪಾಲನೆ, ಕೆಲವೊಮ್ಮೆ ಗಂಡನಿಂದ ಹಿಂಸೆ ಇವರ ಮಧ್ಯೆ ಸಂಘಟನೆಗೆ ಬರುವುದು ಬಹಳ ಕಷ್ಟ. ಆದರೂ ನಾವು ಬಲವಾದ ಸಿ.ಐ.ಟಿ.ಯು.ವನ್ನು ಕಟ್ಟುತ್ತೇವೆ ಎಂದ ಮಾತು ಪ್ರತಿನಿಧಿಗಳ ಮನ ಕಲಕಿತು.

ಬೀಡಿ ಕೈಗಾರಿಕೆಯಿಂದ ಬಂದ ಮಹಿಳೆಯೊಬ್ಬರ, 'ಸಿ.ಐ.ಟಿ.ಯು. ನೇತೃತ್ವದಲ್ಲಿ ಬೀಡಿ ಸಂಘವನ್ನು ಕಟ್ಟಿ ಹಲವು ಹೋರಾಟ ಮಾಡಿ ಯಶಸ್ವಿಯಾಗಿದ್ದೇವೆ. ಹಾಗೆಯೇ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯನ್ನು ಬಲಪಡಿಸಬೇಕು. ಅರಿಸಿದ, ವಿದ್ಯಾವಂತ ಪೂರ್ಣಾವಧಿ ಕಾರ್ಯಕರ್ತರಿದ್ದರೆ ಇನ್ನಷ್ಟು ಅನುಕೂಲವಾಗುತ್ತದೆ' ಎಂದು ಹೇಳಿದರು.

ಧರ್ಮದ ಹೆಸರಿನಲ್ಲಿ, ನಾಲ್ಕು ಮದುವೆಗಳನ್ನಾದರೂ ಮಾಡಿಕೊಂಡು ಸಾವಿರಾರು ರೂಪಾಯಿ ವರದಕ್ಷಿಣೆ ಪಡೆದು, ತಲಾಖ್ ಎಂಬ ಶಬ್ದದೊಂದಿಗೆ ಮಹಿಳೆಯರನ್ನು ಬೀದಿಪಾಲು ಮಾಡುವುದನ್ನು ಧಾರ್ಮಿಕ ಮೂಲಭೂತವಾದಿಗಳು ಪ್ರೋತ್ಸಾಹಿಸುತ್ತಿದ್ದಾರೆ. ಇದರ ವಿರುದ್ಧ ಸಹ ಸಿ.ಐ.ಟಿ.ಯು. ಧ್ವನಿ ಎತ್ತಬೇಕು.

ಸಿ.ಐ.ಟಿ.ಯು.ವಿನಿಂದಾಗಿ ಬೂರ್ಖಾ ಇಲ್ಲದೆ ವೇದಿಕೆಯಲ್ಲಿ ಮಾತನಾಡುವ ಅವಕಾಶ ಸಿಕ್ಕಿದೆ- ಇದು ಸಂಪ್ರದಾಯದ ಗೊಡ್ಡುತನಕ್ಕೆ ಧಿಕ್ಕಾರ ಎಂದು ಹೇಳಿದ ಮುಸ್ಲಿಂ ಮಹಿಳಾ ಪ್ರತಿನಿಧಿಗಳ ಘೋಷಣೆ.

ಮಹಿಳೆಯರು ಸಂಘಟನೆಗೆ ಇಳಿದಾಗ, ಕಾರ್ಯಕರ್ತೆಯರಾದಾಗ ಅಪಪ್ರಚಾರಗಳು ತಲೆ ಎತ್ತುತ್ತವೆ. ಇದನ್ನು ಧೈರ್ಯವಾಗಿ ಎದುರಿಸಬೇಕು. ನಮ್ಮ ದುಡಿಮೆಗೆ ಸರಿಯಾದ ಪ್ರತಿಫಲಕ್ಕಾಗಿ ನಾವು ಹೋರಾಡುವುದು ನಮ್ಮ ಮರ್ಯಾದೆಗೆ ಕುಂದಲ್ಲ-ಎಂದು ಮಲೆನಾಡಿನಲ್ಲಿ ಬೀಡಿ ಕಾರ್ಮಿಕರನ್ನು ಸಂಘಟಿಸುತ್ತಿರುವ ಮಹಿಳಾ ಪ್ರತಿನಿಧಿ ಸಾರಿದರು.

ಹೀಗೆ ಹತ್ತಾರು ಸಲಹೆಗಳು ಅನುಭವಗಳು ಮಾತನಾಡಿದ ಪ್ರತಿನಿಧಿಗಳಿಂದ ವ್ಯಕ್ತವಾಯಿತು. ಇದು ಸಿ.ಐ.ಟಿ.ಯು. ಸಂಘಟನೆಯನ್ನು ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯನ್ನು ವಿಸ್ತರಿಸುವಲ್ಲಿ ಮತ್ತು ಬಲಪಡಿಸುವುದರಲ್ಲಿ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ರಾಜ್ಯ ಸಿ.ಐ.ಟಿ.ಯು.ವಿನ ಒಟ್ಟು 65 000ಕ್ಕೂ ಹೆಚ್ಚು ಸದಸ್ಯರ ಪೈಕಿ 18098 ಮಹಿಳೆಯರಿದ್ದು 37 ಪ್ರತಿನಿಧಿಗಳು ಭಾಗವಹಿಸಿದ್ದರು. 15 ಪ್ರತಿನಿಧಿಗಳು ವೇದಿಕೆಗೆ ಬಂದು ಮಾತನಾಡಿದರು.

ರಾಜ್ಯ ಮಂಡಳಿಗೆ 13 ಮಂದಿ ಮಹಿಳೆಯರು ಚುನಾಯಿತರಾಗಿದ್ದು ಅವರ ಪೈಕಿ 3 ಮಂದಿ ರಾಜ್ಯ ಸಮಿತಿಗೆ ಚುನಾಯಿತರಾಗಿದ್ದಾರೆ.

ವರದಿ: ಬಾಲಕೃಷ್ಣ

ಬೆಲೆಯೇರಿಕೆ ವಿರುದ್ಧ ರಾಜ್ಯಾದ್ಯಂತ ಕಾರ್ಮಿಕರ ಪ್ರತಿಭಟನೆ

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನ ಕಾರ್ಮಿಕರನ್ನು ಇತರ ದುಡಿಯುವ ಜನ ವಿಭಾಗಗಳನ್ನು ತೀವ್ರವಾಗಿ ಕಾಡುತ್ತಿರುವ ಬೆಲೆಯೇರಿಕೆ, ಅದಕ್ಕೆ ಕಾರಣವಾದ ಆರ್ಥಿಕ ನೀತಿಗಳ ವಿರುದ್ಧ ರಾಜ್ಯಾದ್ಯಂತ ಮಾರ್ಚ್ 21ರಂದು ಪ್ರತಿಭಟನೆ ನಡೆಸಲು ಕರೆ ನೀಡಿತ್ತು. ಈ ಕರೆಗೆ ಓಗೊಟ್ಟು ರಾಜ್ಯದ ಎಲ್ಲೆಡೆ ಕಾರ್ಮಿಕರು ನಡೆಸಿದ ಪ್ರತಿಭಟನೆಗಳ ವರದಿಗಳು ಬರುತ್ತಿವೆ. ಕೆಲವು ಇಲ್ಲಿವೆ.

ಬಂಟ್ವಾಳ

ಬಂಟ್ವಾಳ ತಾಲ್ಲೂಕಿನ ಸಿ.ಐ.ಟಿ.ಯು.ವಿಗೆ ಸೇರಿದ ಕಾರ್ಮಿಕ ಸಂಘಗಳ ಸದಸ್ಯರುಗಳು ತಾ|| 21ರಂದು ಬಂಟ್ವಾಳದಲ್ಲಿ ಬೆಲೆಯೇರಿಕೆಯನ್ನು ಪ್ರತಿಭಟಿಸಿ ಮತ ಪ್ರದರ್ಶನ ನಡೆಸಿದರು.

ಸಿ.ಐ.ಟಿ.ಯು.ವಿನ ವತಿಯಿಂದ ಸರ್ಕಾರಕ್ಕೆ ಮನವಿ ಪತ್ರವನ್ನು ಕಳುಹಿಸಿ ಬೆಲೆ ಏರಿಕೆಗೆ ರಾಜೀವ್ ಸರ್ಕಾರದ ಹಣಕಾಸಿನ ನೀತಿಯು ಮುಖ್ಯ ಕಾರಣವೆಂದು ತಿಳಿಸಿ ಸರ್ಕಾರದ ತೆರಿಗೆ ನೀತಿಯನ್ನು ಮನವಿಯಲ್ಲಿ ಖಂಡಿಸಿದೆ.

ರೇಶನ್ ಅಕ್ಕಿಯನ್ನು ಸಾಕಷ್ಟು ಪ್ರಮಾಣದಲ್ಲಿ ಏರಿಸಬೇಕಾಗಿರುವಾಗ ರೇಶನ್ ಪ್ರಮಾಣವನ್ನು ಕಡಿತ ಮಾಡಿರುವುದನ್ನು ಮತ್ತು ಅದರ ಬೆಲೆಯನ್ನು ಏರಿಸಿರುವುದನ್ನು ಮನವಿ ಖಂಡಿಸಿದೆ. ಹೋಟೇಲು ಮಾಲಿಕರು ಚಾ, ಕಾಫಿ, ತಿಂಡಿ, ಊಟದ ಬೆಲೆಗಳನ್ನು ಏರಿಸಿರುವುದನ್ನು ನಿಯಂತ್ರಿಸಬೇಕೆಂದು ಹಳ್ಳಿ ಪಟ್ಟಣ ಎಂಬ ಭೇದವಿಲ್ಲದೆ ಪಡಿತರ ಚೀಟಿಯ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಾಮಗ್ರಿಗಳನ್ನು ನ್ಯಾಯ ಬೆಲೆಯಲ್ಲಿ ವಿತರಿಸಬೇಕೆಂದು ಕೇಳಿಕೊಳ್ಳಲಾಗಿದೆ. ಕರ್ನಾಟಕ ಸರ್ಕಾರವು ಹಾಲಿನ ಬೆಲೆಯನ್ನು ಏರಿಸಿದ್ದನ್ನು ಕೂಡಲೇ ಇಳಿಸಬೇಕೆಂದು ಒತ್ತಾಯಿಸಿದೆ.

ಪ್ರದರ್ಶನಕಾರರು ಬಂಟ್ವಾಳದಲ್ಲಿ ಸಭೆಯೊಂದನ್ನು ಜರುಗಿಸಿ ಹಣದುಬ್ಬರ, ಬೆಲೆಯೇರಿಗಳಿಗೆ ದೇಶವನ್ನಾಳುತ್ತಿರುವ ಕಾಂಗ್ರೆ ಸರ್ಕಾರದ ಅಪಾಯಕಾರಿ ಬಜೆಟ್ ನೀತಿಯೇ ಕಾರಣವೆಂದು ಅಭಿಪ್ರಾಯ ಪಡಲಾಯಿತು. ಈ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿ ಕಾರ್ಯದರ್ಶಿ ಶ್ರೀ ಬಿ.ವಾಸುಗಟ್ಟಿ ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಬಿ.ಹವಾಲಯ್ಯ ಬಂಗೇರ, ಬಂಟ್ವಾಳ ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ.ನಾರಾಯಣ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ.(ಎಂ)ನ ಜಿಲ್ಲಾ ಮುಖಂಡ ಶ್ರೀ ಯು.ಜನಾರ್ಧನ ನ್ಯಾಯ್ಕ ವಹಿಸಿದ್ದರು.

ಹಾಸನದಲ್ಲಿ

ತಾ|| 21-3-89ರಂದು ಸುಮಾರು 60 ಕಾರ್ಮಿಕರು ಮತ್ತು ಯುವಕರು ಬೆಲೆಯೇರಿಕೆಯನ್ನು ವಿರೋಧಿಸಿ ಹಾಸನದ ಜಿಲ್ಲಾಧಿಕಾರಿಯವರ ಕಛೇರಿ ಎದುರು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3ಗಂಟೆಯವರೆವಿಗೆ ಧರಣಿ ಸತ್ಯಾಗ್ರಹ ನಡೆಸಿದರು. ಸರ್ಕಾರಕ್ಕೆ ಜಿಲ್ಲಾಧಿಕಾರಿಯವರ ಮುಖಾಂತರ ಮನವಿ ಪತ್ರ ಕೊಡಲಾಯ್ತು. ಈ ಕಾರ್ಯಕ್ರಮದ ನೇತೃತ್ವವನ್ನು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಸದಸ್ಯ ಕಾ|| ಕೆ.ಟಿ.ರಾಘವೇಂದ್ರ ವಹಿಸಿದ್ದರು.

ಕವುಕೊಡಿ ಎಸ್ಟೇಟ್‌ನ ಕಾರ್ಮಿಕರು ಸಿ.ಐ.ಟಿ.ಯು. 5 ನೆಯ ರಾಜ್ಯ ಸಮ್ಮೇಳನದ ಕರೆಯನ್ನು ಯಶಸ್ವುಗೊಳಿಸಲು ತಾ|| 21-3-1989ರಂದು ಸಂಜೆ 4ಗಂಟೆಗೆ ಎಸ್ಟೇಟ್‌ನ ಹೊರಗೆ ಸಭೆ ಸೇರಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಸುವುದನ್ನು ಖಂಡಿಸಿದರು. ಈ ಸಭೆಯಲ್ಲಿ ಸುಮಾರು 70ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದು, ಕರ್ನಾಟಕ ತೋಟ ಕಾರ್ಮಿಕರ ಸಂಘದ ಉಪಾಧ್ಯಕ್ಷ ಕಾ|| ವಿ. ಕೃಷ್ಣಮೂರ್ತಿ ಕಾರ್ಯಕಾರಿ ಸಮಿತಿ ಸದಸ್ಯ ಕಾ|| ಎಸ್.ರಾಜೇಂದ್ರ ಹಾಗೂ ಮಹಿಳಾ ಸದಸ್ಯರುಗಳಾದ ಶಾಂತಮ್ಮ, ಮೀನಾಕ್ಷಿ ಮೊದಲಾದವರು ಮಾತನಾಡಿದರು.

ದಾಂಡೇಲಿ

ದಾಂಡೇಲಿಯಲ್ಲಿ ಮೂರು ಸಿ.ಐ.ಟಿ.ಯು. ಸಂಘಗಳ ಕಾರ್ಮಿಕರು ಮೆರವಣಿಗೆಯ ಮೂಲಕ ದಾಂಡೇಲಿ ನಗರದಲ್ಲಿ ಸುತ್ತುವರೆದು ಪಕ್ಷದ ಕಛೇರಿ ಮುಂದೆ ಪ್ರತಿಭಟನಾ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಕಾ|| ಟಿ.ಎಸ್.ನಾಯ್ಕ ಕಾ|| ಹರೀಶನಾಯ್ಕ ಉಮೇಶನಾಯ್ಕ ಮಾತನಾಡಿ ವಂದನೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು.

ಯಶಸ್ವೀ ಆಟೋ ಮುಷ್ಕರ ಮಣಿದ ಸರ್ಕಾರ

ಮೂರು ದಿನಗಳ ಕಾಲ ಸತತವಾಗಿ ಆಟೋ ಚಾಲಕರ ಮುಷ್ಕರ ಸಂಪೂರ್ಣ ಯಶಸ್ವಿಯಾದದ್ದು ಬೆಂಗಳೂರಿನ ಆಟೋ ಚಾಲಕರ ಹೋರಾಟದಲ್ಲೊಂದು ಮೈಲಿಗಲ್ಲು. ಇಂಟಕ್‌ನ ಅರಾಜಕ ಹೋರಾಟದಿಂದ ಯಾವುದೇ ಪ್ರಯೋಜನವಿಲ್ಲದೆ ಪೆಟ್ಟು ತಿಂದಿದ್ದ ಆಟೋ ಚಾಲಕರು ಮತ್ತೆ ದೃಢ ಮನಸ್ಸಿನಿಂದ ಸಂಪೂರ್ಣವಾಗಿ ಪಾಲುಗೊಂಡದ್ದು ಸಿ.ಐ.ಟಿ.ಯು. ನೇತೃತ್ವದ ಸಂಘದ ಶ್ರಮ ಹಾಗೂ ಸಮಸ್ಯೆಯ ತೀವ್ರತೆಯನ್ನು ಪ್ರತಿಬಿಂಬಿಸುತ್ತದೆ.

ಕನಿಷ್ಠ ಬಾಡಿಗೆ 2-5 0ಕ್ಕೆ ಹಾಗೂ ನಂತರದ ದರ ಕಿ.ಮೀ.ಗೆ ರೂ. 1-30ಕ್ಕೇರಿಸಬೇಕು ಎಂಬ ಬೇಡಿಕೆಯೊಡನೆ ಸಿ.ಐ.ಟಿ.ಯು.ಗೆ ಸೇರಿದ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಎ.ಆರ್.ಡಿ.ಯು) ನೀಡಿದ ಕರೆಗೆ ಎಲ್ಲಾ ಚಾಲಕರೂ ಓಗೊಟ್ಟರು.

ಬಸ್‌ಗಳಲ್ಲಿ ಜನರ ಅಪಾರ ಒತ್ತಡ ಪ್ರಯಾಣಿಕರ ಆಕ್ರೋಶ, ಹೆಚ್ಚು ಬಸ್‌ಗಳನ್ನು ಓಡಿಸಲು ಬಸ್‌ಗಳ ಕೊರತೆ, ಎಷ್ಟು ಜಟಕಾದಲ್ಲಿ ತುಂಬಿದರೂ ಇನ್ನೂ ಉಳಿಯುವ ಪ್ರಯಾಣಿಕರ ಸಮಸ್ಯೆ ಸರ್ಕಾರಕ್ಕೆ ಅರಿವಾಗತೊಡಗಿತು. ಮೆತ್ತಗಾದ ಸರ್ಕಾರ ಇದೀಗ ಬೇಡಿಕೆಗಳ ಬಗ್ಗೆ ಸರಿಯಾಗಿ ಮಾತನಾಡಲು ಪ್ರಾರಂಭಿಸಿತು. ಅದರಂತೆ ಆಟೋ ಮುಷ್ಕರ ನಿಲ್ಲಿಸಲು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಕರೆ ನೀಡಿತು. ಕೊನೆಗೂ ಹೋರಾಟ ಹಾಗೂ ಒಗ್ಗಟ್ಟಿಗೆ ಜಯ.

ಆದರೆ ಈ ಮುಷ್ಕರದಿಂದಾಗಿಯೇ ಹಲವು ವಿಚಿತ್ರಗಳೂ ಹೊರಬಿದ್ದವು. ಎಲ್ಲಾ ಪತ್ರಿಕೆಗಳೂ ಬೀದಿ ಬೀದಿಗಳಲ್ಲಿ ಆಟೋ ಇರಲಿಲ್ಲ ಎಂದು ವರದಿ ಮಾಡಿ ಆಟೋ ಮುಷ್ಕರವನ್ನು ಸಂಪೂರ್ಣ ಯಶಸ್ವಿ ಎಂದು ಕರೆದರೆ ಸಂಯುಕ್ತ ಕರ್ನಾಟಕ ಮಾತ್ರ ತದ್ವಿರುದ್ಧ ವರದಿ ಪ್ರಕಟಿಸಿತು. ಆಟೋ ಮುಷ್ಕರ ಭಾಗಶಃ ಯಶಸ್ವಿ ಎಂದು ಕರೆಯಿತು. ಎಲ್ಲಾ ಪತ್ರಿಕೆಗಳಿಗೂ ಕಾಣದ ಆಟೋಗಳು ಸಂಯುಕ್ತ ಕರ್ನಾಟಕಕ್ಕೆ ಕಂಡದ್ದು ಹೇಗೆ?

ಜೊತೆಯಲ್ಲೇ ಕಾಂಗ್ರೆಸ ಇಂಟಕ್ ನೇತೃತ್ವದ ಅಸ್ತಿತ್ವದಲ್ಲಿರುವ ಆಟೋ ಸಂಘ ಮುಷ್ಕರದ ಮುನ್ನ ಆಟೋ ಮುಷ್ಕರ ನಡೆಸಬೇಡಿ ಎಂದು ಕರೆ ನೀಡಿತು. ಆಟೋ ಪ್ರಯಾಣಿಕರಿಗೆ ಸಿಗುತ್ತದೆ ಎಂದು ಪ್ರಕಟಿಸಿತು. ಆದರೆ ಯಾವ ಆಟೋಗಳು ಬೀದಿಗಿಳಿಯದಿದ್ದಾಗ ಮಾತ್ರ ಯಶಸ್ವಿ ಮುಷ್ಕರವೊಂದನ್ನು ಮುರಿಯುವ ಕಾಂಗ್ರೆಸ ಬಣ್ಣ ಬಯಲಿಗೆ ಬಂತು.

ಆಟೋ ಡ್ರೈವರ್ಸ್ ಯೂನಿಯನ್‌ನ (ಸ್ವರಾಜ್ಯ ಪಕ್ಷ) ಅಧ್ಯಕ್ಷ ಕೆ.ಕೆ.ಮಿಶ್ರ ಪೊಲೀಸ್ ಕಮೀಷನರ್ ಆಶ್ವಾಸನೆ ನೀಡಿದ್ದಾರೆ. ಆಟೋರಿಕ್ಷಾ ಓಡಿಸಿ ಎಂದು ಮೊದಲ ದಿನವೇ ಕರೆ ನೀಡಿದರು. ಇದಕ್ಕೂ ತಕ್ಕ ಉತ್ತರ ನೀಡಿ ಮುಷ್ಕರ ಯಶಸ್ವಿಗೊಳಿಸಿದ ಆಟೋ ಸಂಗಾತಿಗಳ ಶ್ರಮ ಅಭಿನಂದನಾರ್ಹ.

ವಿಧಾನ ಸಭೆಯಲ್ಲಿ ಪ್ರತಿಧ್ವನಿ

ಅತ್ಯಂತ ಯಶಸ್ವಿಯಾಗಿ ನಡೆದ ಈ ಬಾರಿಯ ಮುಷ್ಕರ ವಿಧಾನ ಸಭೆಯಲ್ಲೂ ಮಾರ್ಧನಿಸಿತು. ಸಿ.ಪಿ.ಐ.(ಎಂ) ಶಾಸಕ ವೆಂಕಟರಾಮಯ್ಯ ವಿಧಾನ ಸಭೆಯಲ್ಲಿ ಚಾಲಕರ ಸಮಸ್ಯೆ ಪ್ರಸ್ತಾಪಿಸಿದರು. ಸಾರಿಗೆ ಸಚಿವ ಸಿದ್ಧರಾಮಯ್ಯ ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳುವ ಘಟ್ಟದಲ್ಲಿದೆ ಎಂದರು.ದರ ಪರಿಷ್ಕರಣದ ಪ್ರಮಾಣದ ಬಗ್ಗೆ ಸ್ಪಷ್ಟ ಭರವಸೆ ನೀಡದುದನ್ನು ಪ್ರತಿಭಟಿಸಿ ಕಾ|| ಆರ್.ವೆಂಕಟರಾಮಯ್ಯ ಸಭಾತ್ಯಾಗ ಮಾಡಿದರು.

ರಾಜ್ಯ ಸರ್ಕಾರೀ ನೌಕರರ ಬೃಹತ್ ವಿಧಾನ ಸೌಧ ಚಲೋ

ರಾಷ್ಟ್ರೀಯ ವೇತನ ನೀತಿಯನ್ನು ರೂಪಿಸುವುದು, ಬೋನಸ್ಸು ನೀಡುವುದು, ನಗದು ರೂಪದಲ್ಲಿ ತುಟ್ಟಿಭತ್ಯೆ ನೀಡುವುದು, ಸಾಂದರ್ಭಿಕ ರಜೆಯನ್ನು ಹೆಚ್ಚಿಸುವುದು, ಕಛೇರಿ ವೇಳೆಯನ್ನು ಬದಲಾಯಿಸುವುದು, ಬಡ್ತಿ ಸ್ಥಾನಗಳನ್ನು ಸಕಾಲದಲ್ಲಿ ತುಂಬುವುದು, ಹುಡ್ಕೋ ನೆರವಿನಿಂದ ಮನೆ ಕಟ್ಟಲು ಸಾಲ ನೀಡುವುದು ಇತ್ಯಾದಿ 28 ಬೇಡಿಕೆಗಳನ್ನು ಒತ್ತಾಯಿಸಲು ಮಾರ್ಚ್ 10ರಂದು 5 0ಸಾವಿರಕ್ಕೂ ಹೆಚ್ಚು ರಾಜ್ಯ ಸರ್ಕಾರಿ ನೌಕರರು ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಂದು ಬೆಳಿಗ್ಗಿನಿಂದಲೇ ರಾಜ್ಯದ ಎಲ್ಲಾ 175 ತಾಲ್ಲೂಕುಗಳಿಂದಲೂ ನೌಕರರು ಸಂಘದ ಬ್ಯಾನರ್‌ಗಳ ಸಹಿತ ಕಬ್ಬನ್‌ಪಾರ್ಕಿಗೆ ಬರಲಾರಂಭಿಸಿದರು. ಬೆಂಗಳೂರು ನಗರದಲ್ಲಿ ಮಧ್ಯಾಹ್ನ ನಂತರ ಎಲ್ಲಾ ಸರ್ಕಾರಿ ಕಛೇರಿಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದ್ದುವು.

ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷೆ ಕಾ|| ಮೇರಿ ದೇವಸಿಯವರು ನೆರೆದ ಜನಸ್ತೋಮಕ್ಕೆ ಕೈ ಬೀಸಿ ಅಭಿನಂದಿಸುವುದರೊಂದಿಗೆ, ಮಧ್ಯಾಹ್ನ 2ಗಂಟೆಗೆ ಮೆರವಣಿಗೆಯು ಕಬ್ಬನ್‌ಪಾರ್ಕಿನಿಂದ ಪ್ರಾರಂಭವಾಯಿತು. ಮೆರವಣಿಗೆಯು ಕೆ.ಆರ್.ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಮಹಾರಾಣಿ ಕಾಲೇಜು ವೃತ್ತ, ಬಸವೇಶ್ವರ ವೃತ್ತದ ಮೂಲಕ ಹಾದು ಸಂಜೆ 4ಗಂಟೆಗೆ ವಿಧಾನಸೌಧ ತಲುಪಿತು. ಮಹಿಳಾ ನೌಕರರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದ ಬೃಹತ್ ಮೆರವಣಿಗೆಯುದ್ದಕ್ಕೂ "ಇಂಕ್ವಿಲಾಬ್ ಜಿಂದಾಬಾದ್, ನೌಕರರ ಐಕ್ಯತೆ ಚಿರಾಯುವಾಗಲಿ, ನಮ್ಮ ಬೇಡಿಕೆಗಳು ಈಡೇರಲಿ" ಘೋಷಣೆಗಳು ಮುಗಿಲು ಮುಟ್ಟಿದವು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ನೌಕರರು ಇಷ್ಟು ದೊಡ್ಡ ಮೆರವಣಿಗೆ ನಡೆದಿರಲಿಲ್ಲ. ಇದು ಐಕ್ಯ ಹೋರಾಟದ ಮುನ್ನಡೆಯುತ್ತಿರುವ ನೌಕರರ ಸಂಘಟನೆಯ ಸ್ಪಷ್ಟ ಬೆಳವಣಿಗೆಯಾಗಿದೆ.

ವಿಧಾನಸೌಧದ ಬಳಿ ಸೇರಿದ ರ್‍ಯಾಲಿಯನ್ನುದ್ದೇಶಿಸಿ, ಸಂಘದ ಅಧ್ಯಕ್ಷರಾದ ಎಂ.ಟಿ.ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಸಿಪ್ಪೇಗೌಡ ಮೊದಲಾದ ಮುಖಂಡರುಗಳು ಮಾತನಾಡಿದರು.

ನಂತರ ಮುಖ್ಯಮಂತ್ರಿಗಳಿಗೆ ಸಂಘದ ವತಿಯಿಂದ ಬೇಡಿಕೆಗಳ ಮನವಿಯನ್ನು ಸಲ್ಲಿಸಲಾಯಿತು. ಈಗಾಗಲೇ ಕೆಲವೊಂದು ಬೇಡಿಕೆಗಳನ್ನು ಸರ್ಕಾರವು ಈಡೇರಿಸಿದೆ.

ನಿರುದ್ಯೋಗ ವಿರೋಧಿ ವಾರಾಚರಣೆ

ಡಿ.ವೈ.ಎಫ್.ಐ. ಕರೆಯಂತೆ ಬೆಂಗಳೂರು ಜಿಲ್ಲಾ ಸಮಿತಿಯು ದಿನಾಂಕ 21-3-89ರಿಂದ 28-3-89ರವರೆಗೆ ನಿರುದ್ಯೋಗ ವಿರೋಧಿ ವಾರಾಚರಣೆಯನ್ನು ಯಶಸ್ವಿಯಾಗಿ ಆಚರಿಸಿತು. ಈ ಕಾರ್ಯಕ್ರಮದ ಭಾಗವಾಗಿ ದಿನಾಂಕ 27-3-89ರಿಂದ 28-3-89ರವರೆಗೆ ಎರಡು ದಿನಗಳ ಕಾಲ ವಿಧಾನಸೌಧದ ಎದುರು ಯುವಜನರ 12 ಬೇಡಿಕೆಗಳನ್ನು ಒತ್ತಾಯಿಸಿ ಸಾಮೂಹಿಕ ಧರಣಿಯನ್ನು ಯಶಸ್ವಿಯಾಗಿ ನಡೆಸಲಾಯಿತು.

ಧರಣಿಯಲ್ಲಿ ಸುಮಾರು 15 0ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಮೊದಲ ದಿನದ ಧರಣಿಯ ನೇತೃತ್ವವನ್ನು ಜಿಲ್ಲಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ವಹಿಸಿದ್ದರು. ಎರಡನೆಯ ದಿನದಂದು ಎಸ್.ಆನಂದ್ ಮತ್ತು ಬಿ.ಎಸ್.ಗುರು ಮೂರ್ತಿ ವಹಿಸಿದ್ದರು.

ಈ ಸಾಮೂಹಿಕ ಧರಣಿಯಲ್ಲಿ, ರಾಜ್ಯಾಧ್ಯಕ್ಷರಾದ ಎಚ್.ಎನ್.ನಾಗಮೋಹನ್ ದಾಸ್, ರಾಜ್ಯ ಕಾರ್ಯದರ್ಶಿ ಎಸ್.ಶಿವರಾಂ, ರಾಜ್ಯ ಖಜಾಂಚಿ ಹಾಗೂ ಜಿಲ್ಲಾಕಾರ್ಯದರ್ಶಿ ಟಿ.ಶಿವಶಂಕರ್, ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಸಮಿತಿ ಸದಸ್ಯರು ಇತರರು ಭಾಗವಹಿಸಿದ್ದರು.

ಸಿದ್ದಾಪುರದಲ್ಲಿ ರ್‍ಯಾಲಿ, ಸಭೆ

ಮಾರ್ಚ್ 12ರಂದು ಕೊಡಗು ಜಿಲ್ಲೆಯ ಸಿದ್ದಾಪುರದಲ್ಲಿ ಬೆಲೆಯೇರಿಕೆ ವಿರುದ್ಧ ಪ್ರತಿಭಟನಾ ಮೆರವಣಿಗೆ ಸಭೆ ನಡೆಸಲಾಯಿತು. ಸಭೆಯಲ್ಲಿ ರಾಜ್ಯ ಸಹಕಾರ್ಯದರ್ಶಿ ಕಾ|| ಸ್ಟ್ಯಾನ್ಲಿವಾಜ್, ವಿರಾಜಪೇಟೆ ನಗರ ಅಧ್ಯಕ್ಷ ಹರೀಶ್, ಎಸ್.ಎಫ್.ಐ.ನ ಕಾ|| ವಾರಿಜ, ಕಾಳಯ್ಯ,

ನೋವಿನ ಘಟನೆ

ಉದ್ಯೋಗದ ಆಶಯ ಹೊತ್ತು ಸ್ಫೂರ್ತಿಯಿಂದ ಹೋರಾಟದ ಕಣಕ್ಕೆ ದೂರದ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಲಾಡುಮುಗಳಿ ಗ್ರಾಮದಿಂದ ಆಗಮಿಸಿದ್ದ ಕಾ|| ಶಿವಶರಣಪ್ಪ ಪೂಜಾರ್‌ರವರು ತೀವ್ರವಾದ ಅನಾರೋಗ್ಯಕ್ಕೆ ಒಳಗಾಗಿ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ದಾಖಲಾಗಿ ಸರ್ವ ಪ್ರಯತ್ನದ ನಂತರವೂ ಮೃತರಾದರು. ದುಃಖಿತ ಕುಟುಂಬಕ್ಕೆ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸಂತಾಪ ವ್ಯಕ್ತಪಡಿಸಿದೆ.

ದೇವಕಿ ಕಾ|| ಮೋಹನ್ ಹಾಗೂ ಕಾರ್ಮಿಕ ಮುಖಂಡ ಕಾ|| ಅಂತೋಣಿ ಮಾತನಾಡಿದರು. ಕಾ|| ದಾಮೋದ್ ಸ್ವಾಗತಿಸಿ ಮಂಜಮ್ಮ ವಂದಿಸಿದರು.

ಭಗತ್‌ಸಿಂಗ್ ದಿನಾಚರಣೆ

ಮಾರ್ಚ್ 24ರಂದು ಬಿಜಾಪುರದಲ್ಲಿ ಹುತಾತ್ಮ ಭಗತ್‌ಸಿಂಗ್ ದಿನಾಚರಣೆಯನ್ನು ಪ್ರಾಂತರೈತ ಸಂಘ, ಡಿ.ವೈ.ಎಫ್.ಐ. ಹಾಗೂ ಎ.ಐ.ಎಸ್.ಎಫ್. ಸಂಘಟನೆಗಳು ಜಂಟಿಯಾಗಿ ಆಚರಿಸಿದವು.

ಭಾರತದ ಸ್ವಾತಂತ್ರ್ಯಕ್ಕಾಗಿ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿ ಗಲ್ಲಿಗೇರಿ ಹುತಾತ್ಮರಾದ ಅಪ್ರತಿಮ ಸ್ವಾತಂತ್ರ ಹೋರಾಟಗಾರ ಭಗತ್‌ಸಿಂಗ್ ಅಂದು ವೀರ ಮರಣವನ್ನಪ್ಪುವಾಗಲೂ ವಿಚಲಿತರಾಗದೆ ಕ್ರಾಂತಿ ಚಿರಾಯುವಾಗಲಿ, ಸಾಮ್ರಾಜ್ಯಶಾಹಿ ನಾಶವಾಗಲಿ ಎಂದು ಘೋಷಣೆ ನೀಡಿದ್ದರು. ತ್ಯಾಗ ಬಲಿದಾನಗಳ ಪ್ರತೀಕವಾಗಿರುವ ಭಗತ್‌ಸಿಂಗ್‌ರ ಆದರ್ಶಗಳನ್ನು ಇಂದಿನ ಯುವಜನತೆ ರೂಡಿಸಿಕೊಳ್ಳಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘ,. ವಿದ್ಯಾರ್ಥಿ-ಯುವಜನ ಸಂಘಟನೆಗಳ ಮುಖಂಡರು ಕರೆ ನೀಡಿದರು. ಹಿರಿಯ ಸ್ವಾತಂತ್ರ ಹೋರಾಟಗಾರ ಶ್ರೀ ಎಲ್.ಬಿ.ಲಾಯದ್‌ಗುಂದಿ ಸಭೆಯ ಅಧ್ಯಕ್ಷತೆ ವಹಿಸಿದರು. ಪ್ರೊ|| ಎಚ್.ಎಂ. ಭೂತನಾಳ, ಪ್ರಕಾಶ್ ಹಿಟ್ನಳ್ಳಿ, ವಿದ್ಯಾರ್ಥಿ ಮುಖಂಡರಾದ ಕಾ|| ಶ್ರೀಧರ ಕುಲಕರ್ಣಿ, ಎಲ್.ವೈ.ಹಂದ್ರಾಳ ನದಾಫ್, ಯುವ ಮುಖಂಡ ಕಾ|| ಮನ್ನುಸಾಬ ಕಲಾದಗಿ, ರೈತ ಮುಖಂಡರಾದ ಕಾ|| ಭೀಮಸಿ ಕಲಾದಗಿ, ಎ.ಐ.ಎಸ್.ಎಫ್.ನ ಕಾ|| ಸುರೇಶ್‌ಅರಳಿಯವರುಗಳು ಮಾತನಾಡಿದರು.

ಮಾರ್ಚ್ 5 ರಂದು ನಿಧನರಾದ ಭಗತ್‌ಸಿಂಗ್ ಜೊತೆಯಲ್ಲಿದ್ದು ಅವರಿಗೆ ಪ್ರೇರಣೆಯಾಗಿದ್ದ ಬಾಬಾ ಪೃಥ್ವಿಸಿಂಗ್, ಪ್ರಸಿದ್ಧ ಕಲಾವಿದ ಕಾ|| ಸಫ್ದರ್‌ಹಾಶ್ಮಿ ಹಾಗೂ ರಾಜಕಾರಣಿ ಬಹುಗುಣರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

"ಮಿಲಿಟರಿ ಶಾಹಿಗಳು ರಕ್ತಪಾತ ಮಾಡಿಸುತ್ತಿದ್ದಾರೆ" ವಲೀಖಾನ್ ಟೀಕೆ

ಮಾರ್ಚ್ 26ರರೊಳಗೆ ಜಲಾಲಾಬಾದ್ ನಗರವನ್ನು ವಶಪಡಿಸಿಕೊಳ್ಳಬೇಕು. ಇದು ಅಫ್‌ಘಾನ್ ಬಂಡುಕೋರರು ಅನುಸರಿಸಬೇಕಾದ ಸಮರ ತಂತ್ರ. ಹೀಗೆಂದು ವಿಧಿಸಿದವರು ಪಾಕಿಸ್ತಾನೀ ಮಿಲಿಟರಿ ಗುಪ್ತಚರ ಮುಖಂಡರು. ಆದರೆ ಅವರು ಹೇರಿದ ಈ ತಂತ್ರ ಇನ್ನೂ ಫಲಿಸಿಲ್ಲ. ಒಂದು ತಿಂಗಳಲ್ಲಿ ಪ್ರತೀದಿನ ಅಮೇರಿಕಾ ದಾನ ಮಾಡಿದ ಐದು ಸಾವಿರ ಕ್ಷಿಪಣಿಗಳನ್ನು ಎಸೆದು ಬಂಡುಕೋರರು ತೀವ್ರ ಪ್ರಯತ್ನ ನಡೆಸಿ ದರೂ ಸತತವಾಗಿ ಮೂರನೇ ಬಾರಿ ಈ ಪ್ರಯತ್ನವನ್ನು ಅಫ್‌ಘಾನ್ ಪಡೆಗಳು ವಿಫಲಗೊಳಿಸಿವೆ.

ಅಫ್‌ಘಾನಿಸ್ತಾನದಲ್ಲಿ ಬಹಿರಂಗ ಮಧ್ಯಪ್ರವೇಶ ನಡೆಸಿ ಪಾಕಿಸ್ತಾನೀ ಮಿಲಿಟರಿ ಶಾಹಿಗಳ ಕುಮ್ಮಕ್ಕಿನಿಂದ ನಡೆಯುತ್ತಿರುವ ರಕ್ತಪಾತವನ್ನು ತಡೆಯು ಬೇಕೆಂದು ಪಾಕಿಸ್ತಾನದ ಅವಾಮೀ ರಾಷ್ಟ್ರೀಯ ಪಕ್ಷದ ಮುಖಂಡ ವಲೀಖಾನ್‌ರವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪೆರೆಸ್‌ಡೆಕ್ಯೂಲರ್ ರವರನ್ನು ಒತ್ತಾಯಿಸಿದ್ದಾರೆ.

ಬೆನಝಿರ್ ಸರ್ಕಾರವನ್ನು ಬೆಂಬಲಿಸಿದರೂ, ವಾಯುವ್ಯ ಪ್ರಾಂತದಲ್ಲಿ ಬೆನಝಿರ್‌ರವರ ಪಕ್ಷ ಪಿ.ಪಿ.ಪಿ.ಯೊಂದಿಗೆ ಅವಾಮೀ ಪಕ್ಷ ಸಮ್ಮಿಶ್ರ ಸರ್ಕಾರ ನಡೆಸುತ್ತಿದ್ದರೂ ವಲೀಖಾನ್‌ರವರು ಪಾಕಿಸ್ತಾನದ ಅಫ್‌ಘಾನ್ ಧೋರಣೆಯನ್ನು ತೀವ್ರವಾಗಿ ಟೀಕಿಸಿದ್ದಾರೆ.

ಕಾಬೂಲಿನಲ್ಲಿ ಅಫ್‌ಘಾನ್ ಜನತೆಯ ಇಚ್ಛೆಯ ವಿರುದ್ಧ ಒಂದು ಮೂಲಭೂತವಾದಿ ಸರ್ಕಾರವನ್ನು ಹೇರಲು, ಅದಾಗದಿದ್ದರೆ ಅಫ್‌ಘಾನ್ ದೇಶವನ್ನೇ ನಿರ್ನಾಯ ಮಾಡಲು ಪಾಕಿಸ್ತಾನದ ಮಿಲಿಟರಿ ಶಾಹಿಗಳು ನಗರ-ಯುದ್ಧ ಆರಂಭಿಸಿದ್ದಾರೆ. ರಕ್ತದ ಕೋಡಿ ಹರಿಸಿಯಾದರೂ ಜಲಾಲಾಬಾದ್ ವಶಪಡಿಸಿಕೊಳ್ಳಲು ಅವರು ಹಠ ತೊಟ್ಟಿದ್ದಾರೆ ಎಂದು ವಲೀಖಾನ್ ಟೀಕಿಸಿದರು. "ನಮ್ಮ ಜನತೆ ಪ್ರತೀದಿನ ಪಾಕಿಸ್ತಾನೀ ಮಿಲಿಟರಿ ಟ್ರಕ್ಕುಗಳಲ್ಲಿ ಶಸ್ತ್ರಾಸ್ತ್ರಗಳ ಪೂರೈಕೆ ಅಫ್‌ಘಾನ್ ಪ್ರದೇಶದೊಳಗೆ ಸಾಗುವುದನ್ನು ನೋಡುತ್ತಿದ್ದಾರೆ" ಎಂದಿರುವ ಶ್ರೀಯುತ ವಲೀಖಾನ್‌ರವರು "ಮಿಲಿಟರಿ ಶಾಹಿಗಳು ಅಫ್‌ಘಾನ್ ನಿರಾಶ್ರಿತರನ್ನು ಫಿರಂಗಿಗಳಿಗೆ ಆಹಾರವನ್ನಾಗಿ ಮಾಡಿ ಅವರನ್ನು ಯುದ್ಧಕ್ಕೆ ತಳ್ಳುತ್ತಿದ್ದಾರೆ. ಪಾಕಿಸ್ತಾನೀ ಸೇನೆ ಯುದ್ಧತಂತ್ರ ರೂಪಿಸಿ ನಿರ್ದೇಶಿಸುತ್ತಿದೆ. ಅಮೆರಿಕನ್ ನೆರವಾಗುತ್ತಿದ್ದಾರೆ" ಎಂದು ಪೆರೆಸ್ ಡೆ ಕ್ಯೂಲರ್‌ರವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಸಿಯೋಲ್‌ನಲ್ಲಿ ಕಾರ್ಮಿಕ ಪ್ರತಿಭಟನೆಗಳ ಇನ್ನೊಂದು ಅಲೆ

ದಕ್ಷಿಣ ಕೊರಿಯಾದ ಪೊಲೀಸರು ಬಂದೂಕು, ಬುಲ್‌ಡೋಝರುಗಳನ್ನು ಬಳಸಿ 6000 ಸಬ್‌ವೇ ಕಾರ್ಮಿಕರ ಮುಷ್ಕರ ಮುರಿಯಲು ಪ್ರಯತ್ನಿಸಿದರು. ಸುಮಾರು 2300 ಮುಷ್ಕರ ನಿರತ ಕಾರ್ಮಿಕರನ್ನು ಬಂಧಿಸಲಾಗಿದೆ. ಸುಮಾರು 3000 ಮುಷ್ಕರ ನಿರತ ಕಾರ್ಮಿಕರು ರಾತ್ರಿ ಹಗಲಾಗುವುದರೊಳಗೆ ಒಂದು ಸಬ್‌ವೇ ಡಿಪೋವನ್ನು ವಶಪಡಿಸಿಕೊಂಡು ಬ್ಯಾರಿಕೇಡ್‌ಗಳನ್ನು ನಿರ್ಮಿಸಿ 7ಸಾವಿರ ಸಶಸ್ತ್ರ ಪೊಲೀಸರೊಂದಿಗೆ ಸೆಣಸಾಡಿದರು.

ಮತ್ತೊಮ್ಮೆ ಇಡೀ ದೇಶವನ್ನು, ದೇಶದ ಆರ್ಥಿಕವನ್ನು ಕಾರ್ಮಿಕರ ವ್ಯಾಪಕ ಪ್ರತಿಭಟನೆಗಳು ತೀವ್ರವಾಗಿ ತಲ್ಲಣಗೊಳಿಸಿವೆ ಎಂದು ವರದಿಯಾಗಿದೆ. ಸಬ್‌ವೇ ಕಾರ್ಮಿಕರ ಮುಷ್ಕರ ಈ ಸರಣಿಯ ಇತ್ತೀಚಿನ ಘಟನೆ.

ಟಿಬೆಟ್: ಪಾಶ್ಚಿಮಾತ್ಯರ ನಿಲುವಿಗೆ ಚೀಣಾ ಪ್ರತಿಭಟನೆ

ಟಿಬೇಟ್‌ನಲ್ಲಿ ಕೆಲವು ಊಳಿಗಮಾನ್ಯ ಪ್ರತ್ಯೇಕತಾವಾದಿಗಳು ಗಲಭೆ ನಡೆಸಲು ಮಾಡಿದ ಪ್ರಯತ್ನಗಳನ್ನು ವಿಫಲಗೊಳಿಸಲು ಜನತಾ ಚೀಣಾ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಯುರೋಪಿಯನ್ ಪಾರ್ಲಿಮೆಂಟಿನ ಖಂಡನೆ ಬಗ್ಗೆ ಚೀಣಾ ತನ್ನ ತೀವ್ರ ಆಕ್ಷೇಪ ಹಾಗೂ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಟಿಬೇಟ್ ಚೀಣಾದ ಭಾಗ, ಚೀಣಾದ ಐಕ್ಯತೆಯ ರಕ್ಷಣೆಗೆ, ಪ್ರತ್ಯೇಕತಾವಾದಿಗಳ ದಂಗೆಗಳನ್ನು ತಡೆಯಲಿಕ್ಕೆ ಚೀಣಾ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ ಎಂದು ಯುರೋಪಿಯನ್ ಸಮುದಾಯಕ್ಕೆ ಚೀಣಾದ ರಾಯಭಾರಿಯಾಗಿರುವ ಲಿಯುಶಾನ್ ತಿಳಿಸಿದ್ದಾರೆ.

"ಲ್ಹಾಸಾದ ದಂಗೆ ಮಾನವ ಹಕ್ಕುಗಳ ಪ್ರಶ್ನೆಯಲ್ಲ. ಟಿಬೇಟ್ ಜನತೆಯೂ ಸೇರಿದಂತೆ ಚೀಣಾದ ಜನತೆ ಮತ್ತು ಸರ್ಕಾರ ಯಾವುದೇ ಕಾರಣಕ್ಕೆ ಚೀಣಾವನ್ನು ಛಿದ್ರಗೊಳಿಸಲು, ರಾಷ್ಟ್ರೀಯ ಐಕ್ಯತೆ ಮುರಿಯಲು ಯಾರಿಗೂ ಅವಕಾಶ ಕೊಡುವುದಿಲ್ಲ. ಚೀಣಾದ ಅಂತರಿಕ ವ್ಯವಹಾರಗಳಲ್ಲಿ ಯಾವ ವಿದೇಶೀ ಸರ್ಕಾರವೂ ಮೂಗು ತೂರಿಸಬೇಕಾಗಿಲ್ಲ" ಎಂದು ಚೀಣಾ ವಕ್ತಾರರೊಬ್ಬರು ಸಾಮ್ರಾಜ್ಯಶಾಹಿಗಳು ಅಪಪ್ರಚಾರವನ್ನು ತೀವ್ರವಾಗಿ ಖಂಡಿಸುತ್ತಾ ಹೇಳಿದ್ದಾರೆ.

ಚೀಣಾ ಪ್ರಾಚೀನ ಕಾಲದಿಂದಲೂ ಹಲವಾರು ದೇಸೀ ಜನಾಂಗಗಳಿಂದ ಕೂಡಿದ ದೇಶ. ಅದರಲ್ಲಿ ಟಿಬೇಟನ್ ಜನಾಂಗ ಕೂಡಾ ಒಂದು ಮುಖ್ಯ ಅಂಗ. ಚೀಣಾದ ಇತಿಹಾಸದ ಬಗ್ಗೆ ಅಜ್ಞಾನ ತುಂಬಿದವರು ಅಥವಾ ದುರುದ್ದೇಶ ಹೊಂದಿದವರು ಮಾತ್ರ ಟಿಬೇಟ್ ಪ್ರತ್ಯೇಕ ದೇಶವೆಂಬ ಅಪಪ್ರಚಾರ ನಡೆಸಿದ್ದಾರೆ. ಚೀನಾದ ಸಂವಿಧಾನ ಟಿಬೇಟನ್ ಜನತೆಯ ಹಕ್ಕುಗಳು, ಹಿತಾಸಕ್ತಿಗಳು ಹಾಗೂ ಧಾರ್ಮಿಕ ನಂಬುಗೆಗಳಿಗೆ ಪೂರ್ಣ ಸಂರಕ್ಷಣೆ ಘೋಷಿಸಿದೆ. ಟಿಬೇಟನ್ ಸ್ವಾಯತ್ತ ಪ್ರದೇಶದ ಜನಸಂಖ್ಯೆಯ 95 % ಟಿಬೇಟನ್ ಜನಾಂಗಕ್ಕೆ ಸೇರಿದವರು ಎಂಬ ಅಂಶ ಚೀನಾ ಸರ್ಕಾರ ದೇಶದ ಬಹುಸಂಖ್ಯಾತ ಹಾನ್ ಜನಾಂಗದವರನ್ನು ಟಿಬೇಟ್‌ನಲ್ಲಿ ತಂದು ನೆಲೆಸಿದೆ ಎಂಬ ಅಪಪ್ರಚಾರದ ಬಾಯಿ ಮುಚ್ಚಿಸಿದೆ.

ನಮೀಬಿಯಾ: ವರ್ಣದ್ವೇಷಿಗಳ ಬುಡಮೇಲು ತಂತ್ರ

ನಾಲ್ಕು ದೇಶಗಳ ನಡುವಿನ ಒಪ್ಪಂದದ ಪ್ರಕಾರ ಏಪ್ರಿಲ್ 1ರಿಂದ ನಮೀಬಿಯಾ ಸ್ವಾತಂತ್ರ್ಯದ ಪ್ರಕ್ರಿಯೆ ಆರಂಭವಾಗಬೇಕು. ಆದರೆ ಇದರ ಅಂಗವಾಗಿ ನವೆಂಬರ್‌ನಲ್ಲಿ ನಡೆಯಬೇಕಾದ ಮುಕ್ತ ಚುನಾವಣೆಗಳನ್ನು ಬುಡಮೇಲು ಮಾಡಲು ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ದುಷ್ಟ ಯೋಜನೆ ತಯಾರಿಸಿದ್ದಾರೆ ಎಂದು ಸ್ವಾಪೋ ಅಧ್ಯಕ್ಷ ಸಾಮ್‌ನುಜೋಮಾ ಹೇಳಿದ್ದಾರೆ. ನಮೀಬಿಯಾದಲ್ಲಿ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆಗಳು ನಡೆಯುವಂತೆ ಕ್ರಮ ಕೈಗೊಳ್ಳಬೇಕೆಂದು ನುಜೋಮಾ ಆಫ್ರಿಕನ್ ಐಕ್ಯತಾ ಸಂಘಟನೆಯನ್ನು ಕೇಳಿದ್ದಾರೆ. ಚುನಾವಣೆಗಳಲ್ಲಿ ಅನ್ಯಾಯ ನಡೆದರೆ ಸ್ವಾಪೋ ಮತ್ತೆ ಗೆರಿಲ್ಲಾ ಹೋರಾಟಕ್ಕಿಳಿಯುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಸೇನೆ ದೇಶದಲ್ಲೆಲ್ಲಾ ಶಸ್ತ್ರ ಪೊಟ್ಟಣಗಳನ್ನು ಹುಗಿದಿಡುತ್ತಿದೆ. ಮತದಾನದ ವಯಸ್ಸನ್ನು 21 ವರ್ಷಕ್ಕೇರಿಸಿ ಸ್ವಾಪೋದ ಮತಗಳಲ್ಲಿ ಕಡಿತ ತರಲು ಪ್ರಯತ್ನಿಸಲಾಗುತ್ತಿದೆ. ವರ್ಣದ್ವೇಷಿಗಳ ಈ ಕಸರತ್ತುಗಳನ್ನು ಸ್ವಾಪೋ ಎಂದೂ ಸ್ವೀಕರಿಸುವುದಿಲ್ಲ ಎಂದು ನುಜೋಮಾ ಆಫ್ರಿಕನ್ ಐಕ್ಯತಾ ಸಂಘಟನೆಯ ದಕ್ಷಿಣ ಆಫ್ರಿಕಾ ಕುರಿತಾದ ತಾತ್ಕಾಲಿಕ ಸಮಿತಿಯ ಸಭೆಯನ್ನುದ್ದೇಶಿ ಮಾತನಾಡುತ್ತಾ ಹೇಳಿದ್ದಾರೆ.

ಕಾರ್ಬೈಡ್ ಶರಣಾಗತಿ ವಿರುದ್ಧ ಮಹಿಳೆಯರ ಪ್ರತಿಭಟನೆ

ಹಿಂದೂಸ್ತಾನ್ ಗುಲಾಮ್, ಕಾರ್ಬೈಡ್ ಸಲಾಮ್, ವಿಶ್ವದ ಕೊಲೆಗಾರರಿಗೆ ಭಯ ಬೇಕಿಲ್ಲ, ಭಾರತದಲ್ಲಿ ಮಾನವ ಜೀವಕ್ಕೆ ಬಹಳ ಬೆಲೆಯಿಲ್ಲ-

ಫೆಬ್ರವರಿ 22ರಂದು ದೇಶದ ರಾಜಧಾನಿಯಲ್ಲಿ ಭೋಪಾಲದ ಬಡ ಮಹಿಳೆಯರ ಪ್ರತಿಭಟನೆಯ ದನಿಮೊಳಗಿತು. ಸಾವಿರಾರು ಮಹಿಳೆಯರು ಕಾರ್ಬೈಡ್ ಕೇಸಿನ "ಅಂತಿಮ ಇತ್ಯರ್ಥ"ದ ತೀರ್ಪನ್ನು ಪ್ರತಿಭಟಿಸಲು ಬಂದಿದ್ದರು.

ಜಬ್ಬಾರ್‌ಖಾನ್ 'ಭೋಪಾಲ್ ಅನಿಲ ಪೀಡಿತ ಮಹಿಳಾ ಉದ್ಯೋಗ್' ಸಂಘಟನೆಯನ್ನು ಭೋಪಾಲ್‌ನಲ್ಲಿ ಆರಂಭಿಸಿದ ಒಬ್ಬ ಕಾಂಗ್ರೆಸ್ ಭಿನ್ನಮತೀಯ ಮುಖಂಡ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿರ್ಲಕ್ಷ್ಯತನವನ್ನು ವಿರೋಧಿಸಲು ಅವರು ಮಹಿಳೆಯರನ್ನು ಸಂಘಟಿಸಿದರು. ಅವರ ಪ್ರಕಾರ 5 0ಸಾವಿರ ಮಂದಿ ತೀವ್ರ ತಲೆನೋವು, ಕಣ್ಣಿನ ರೋಗಗಳು, ಅಜೀರ್ಣ, ಚರ್ಮರೋಗಗಳಿಂದ ನರಳುತ್ತಿದ್ದಾರೆ. ಈಗಲೂ ಭೋಪಾಲಿನಲ್ಲಿ ಪ್ರತಿದಿನ 30ರಿಂದ 5 0 ಜನ ಸಾಯುತ್ತಿರುತ್ತಾರೆ. ಒಂದು ಸಾವಿರ ಹೊರ ರೋಗಿಗಳಾಗಿ ಚಿಕಿತ್ಸೆಗೆ ಕಾಯುತ್ತಿದ್ದಾರೆ. ಸರ್ಕಾರ ಈ ಅನಿಲ ಪೀಡಿತರಿಗೆ ನೀಡಬೇಕಾದ ಚಿಕಿತ್ಸೆಯ ಬಗ್ಗೆ ಸಂಶೋಧನೆ ನಡೆಸುವ ವ್ಯವಸ್ಥೆ ಮಾಡುವ ಬಗ್ಗೆ ಏಕೆ ಯೋಚಿಸುವುದಿಲ್ಲ ಎಂದು ಪ್ರಶ್ನಿಸುತ್ತಾರೆ. ಈ ದುರಂತಕ್ಕೆ ತುತ್ತಾದ ಕುಟುಂಬಗಳು ಹಸಿವಿನಿಂದ ಕಂಗಾಲಾಗಿವೆ.

ತಮ್ಮ ತೀವ್ರ ಸಿಟ್ಟನ್ನು ದೆಹಲಿಯ ಪ್ರಭುಗಳಿಗೆ ವ್ಯಕ್ತಗೊಳಿಸಲು ಬಂದ ಈ ಮಹಿಳೆಯರೇ ಭೋಪಾಲ್ ಅನಿಲ ದುರಂತ ಮೂರ್ತಿವೆತ್ತಂತಿದ್ದರು. ಕೈಯಲ್ಲಿ ಸೊರಗಿದ ಮಕ್ಕಳು, ಹೊಟ್ಟೆ ಒಳಸೇರಿದ, ನೀರು ಜಿನುಗುವ ಕಣ್ಣುಗಳು. ಭೋಪಾಲ್ ಸೌಹಾರ್ದ ಗುಂಪಿನ ಸದಸ್ಯರು ಈ ಮಹಿಳೆಯರನ್ನು ಎದುರುಗೊಂಡು ಅವರೊಂದಿಗೆ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿದರು. ಸಿ.ಐ.ಟಿ.ಯು., ಜನವಾದಿ ಮಹಿಳಾ ಸಭಾ ದುಡಿಯುವ ಮಹಿಳೆಯರ ಸಂಯೋಜನಾ ಸಮಿತಿ, ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಸೇರಿಕೊಂಡು ಗುಂಪನ್ನು ಸ್ಥಾಪಿಸಿದ್ದಾರೆ.

ಪಂಜಾಬ್ ಹುತಾತ್ಮರಿಗೆ ಶ್ರದ್ಧಾಂಜಲಿ

ಖಾಲಿಸ್ತಾನಿಗಳ ವಿರುದ್ಧ ಹೋರಾಡಿ ಕಾ॥ ಚನ್ನನ್‌ಸಿಂಗ್ ಧೂತ್ ಹಾಗೂ ಕಾ॥ ಹುಕಮ್‌ಚಂದ್ ಗುಲ್ಷನ್ ಹುತಾತ್ಮರಾಗಿ ಒಂದು ವರ್ಷವಾಯಿತು. ಧೂತ್ ಗ್ರಾಮದಲ್ಲಿ ಫೆಬ್ರವರಿ 15 ರಂದು ಅವರ ವೀರಮರಣದ ಮೊದಲ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಮೂರು ಸಾವಿರಕ್ಕೂ ಹೆಚ್ಚು ಕೃಷಿ ಕಾರ್ಮಿಕರು, ರೈತರು, ಯುವಜನರು ಇದರಲ್ಲಿ ಭಾಗವಹಿಸಿದರು. ಸ್ಥಳೀಯ ಹಾಗೂ ರಾಜ್ಯ ಮುಖಂಡರೂ ಭಾಗವಹಿಸಿದ್ದರು.

ಫೆಬ್ರವರಿ 17ರಂದು ಲೋಂಗೋವಾರ್ ಗ್ರಾಮದಲ್ಲಿ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಿ.ಪಿ.ಐ.(ಎಂ) ಮುಖಂಡ ಪಂಡಿತ ವೈದ್ಯದೇವ ಲೋಂಗೋವಾಲ್‌ರ ಮೊದಲ ಮರಣ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸುಮಾರು ನಾಲ್ಕು ಸಾವಿರ ಮಂದಿ ಇದರಲ್ಲಿ ಭಾಗವಹಿಸಿದರು. ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾ॥ ಸುರ್ಜಿತ್ ಅವರ ಪ್ರತಿಮೆಯ ಅನಾವರಣ ನಡೆಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ರಾಜ್ಯ ಮತ್ತು ಸಂಗ್ರೂರ್ ಜಿಲ್ಲಾ ಸಿ.ಪಿ.ಐ.(ಎಂ) ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪ್ರಜಾಪ್ರಭುತ್ವ ವಿರೋಧಿ ಪ್ರತಿಬಂಧನೆ

ನವದೆಹಲಿಯ ಬೋಟ್ ಕ್ಲಬ್ ಮೈದಾನ ಎಲ್ಲಾ ರಾಜಕೀಯ ಪಕ್ಷಗಳಿಗೆ, ಸಾಮೂಹಿಕ ಸಂಘಟನೆಗಳಿಗೆ, ವ್ಯಕ್ತಿಗಳಿಗೆ ತಮ್ಮ ಒತ್ತಾಯಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಪಾರಂಪರಿಕ ಸ್ಥಳವಾಗಿದೆ. ಜನತೆಯ ಒತ್ತಾಯಗಳಿಗೆ ದನಿ ನೀಡಲು ಇರುವ ದೇಶದ ಅತ್ಯುಚ್ಛ ವೇದಿಕೆಯಾದ ಸಂಸತ್ತಿಗೆ ಸಮೀಪವಿರುವ ಮೈದಾನವಿದು. ಆದ್ದರಿಂದಲೇ ಅದು ಅಷ್ಟೊಂದು ಜನಪ್ರಿಯ. ದೆಹಲಿಯ ಪೊಲೀಸ್ ಕಮೀಷನರ್ ಈಗ ಇಲ್ಲಿ ಎಲ್ಲಾ ಸಭೆಗಳು, ರ್‍ಯಾಲಿಗಳು ಹಾಗೂ ಧರಣಿಗಳನ್ನು ಶಾಶ್ವತವಾಗಿ ಪ್ರತಿಬಂಧಿಸಲು ನಿರ್ಧರಿಸಿದ್ದಾರೆ. ಇದು ಜನತೆಯ ಅಭಿವ್ಯಕ್ತಿ ಮತ್ತು ಪ್ರತಿಭಟನೆಯ ಹಕ್ಕಿನ ಮೇಲೆ ಒಂದು ಗಂಭೀರ ಆಕ್ರಮಣ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತೀವ್ರವಾಗಿ ಖಂಡಿಸಿದೆ. ಈ ಮೂಲಭೂತ ಪ್ರಜಾಪ್ರಭುತ್ವ ಹಕ್ಕಿನ ಮೇಲೆ ಪ್ರತಿಬಂಧನೆಯನ್ನು ಸಿ.ಪಿ.ಐ.(ಎಂ) ಒಪ್ಪಿಕೊಳ್ಳುವುದಿಲ್ಲ ಎಂದು ಅದು ಹೇಳಿದೆ. ಈ [illegible] ಆಜ್ಞೆಯನ್ನು [illegible] ಬೋಟ್‌ಕ್ಲಬ್ ಮೈದಾನವನ್ನು ಬಳಸುವ ಜನತೆಯ ಹಕ್ಕನ್ನು ಮರು [illegible] ಪಾಲಿಟ್‌ಬ್ಯೂರೋ ಎಲ್ಲಾ ರಾಜಕೀಯ ಪಕ್ಷಗಳಿಗೆ, ಸಾಮೂಹಿಕ [illegible] ಕರೆ ನೀಡಿದೆ.

ಆಂಧ್ರಪ್ರದೇಶದಲ್ಲಿ ಡಿ.ವೈ.ಎಫ್.ಐ. ಕ್ರೀಡೋತ್ಸವ

4 87 ಕೇಂದ್ರಗಳಲ್ಲಿ ಡಿ.ವೈ.ಎಫ್.ಐ.ನ ಆಂಧ್ರಪ್ರದೇಶ ಘಟಕ ಈ ವರ್ಷ ನಡೆಸಿದ ಕ್ರೀಡೋತ್ಸವದಲ್ಲಿ 5 2732 ಆಟಗಾರರು, 14745 ಆಟಗಾರ್ತಿಯರು ಭಾಗವಹಿಸಿದರು.

ಕಳೆದ ಆರು ವರ್ಷಗಳಿಂದ ಸತತವಾಗಿ ಡಿ.ವೈ.ಎಫ್.ಐ. ರಾಜ್ಯಾದ್ಯಂತ ಈ ಕ್ರೀಡೋತ್ಸವ ನಡೆಸುತ್ತಿದೆ. ಸಂಕ್ರಾಂತಿ ಹಬ್ಬದ ಮೊದಲು ಈ ಉತ್ಸವ ನಡೆಸಲಾಗುತ್ತದೆ. ಈ ಬಾರಿ ಜನವರಿ 12ರಿಂದ 15 ರವರೆಗೆ ನಡೆಯಿತು. 1984ರಲ್ಲಿ ಮೊದಲ ಬಾರಿ ಕ್ರೀಡೋತ್ಸವ ನಡೆದಾಗ 63 ಕೇಂದ್ರಗಳಲ್ಲಿ, 6400 ಆಟಗಾರರು, ಆಟಗಾರ್ತಿಯರು ಇದರಲ್ಲಿ ಭಾಗವಹಿಸಿದ್ದರು. ವರ್ಷದಿಂದ ವರ್ಷ ಇಂದು ಬೆಳೆಯುತ್ತಾ ಬಂದು ಈಗ ಕ್ರೀಡಾ ಚಟುವಟಿಕೆಗಳು ರಾಜ್ಯದಲ್ಲಿ ಡಿ.ವೈ.ಎಫ್.ಐ.ನ ಚಟುವಟಿಕೆಗಳ ಪ್ರಮುಖ ಅಂಗವಾಗಿಬಿಟ್ಟಿದೆ. ಇದರ ಮೂಲಕ ಹೊಸ ಪ್ರದೇಶಗಳಿಗೆ ಹೋಗಲು, ಯುವಜನರೊಂದಿಗೆ ವ್ಯಾಪಕ ಸಂಪರ್ಕ ಗಳಿಸಲು ಡಿ.ವೈ.ಎಫ್.ಐ.ಗೆ ಸಾಧ್ಯವಾಗಿದೆ. ಜಾತಿ, ಧರ್ಮಗಳ ಭೇದ ಭಾವವಿಲ್ಲದೆ ಯುವಜನರಲ್ಲಿ ಐಕ್ಯತೆ ಮೂಡಿಸುವಲ್ಲಿ ಇದರಿಂದ ದೊರೆಯುವ ಅನುಭವಗಳನ್ನು ಕಂಡ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಇನ್ನೂ ದೊಡ್ಡ ಪ್ರಮಾಣದಲ್ಲಿ ಈ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಿದೆ.

ಸರ್ಕಾರದ ಹಣದಿಂದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಳು ನಡೆಯುತ್ತವೆ. ಆದರೆ ಜಿಲ್ಲೆ ಮತ್ತು ಕೆಳಗಿನ ಮಟ್ಟಗಳಲ್ಲಿ [illegible]ಗುವ ಅಲ್ಪ ಹಣವೂ ದುರುಪಯೋಗವಾಗಿ ಭ್ರಷ್ಟ ಕೈಗಳಿಗೆ ಹೋಗಿ ಗ್ರಾಮೀಣ ಕ್ರೀಡಾಪಟುಗಳಿಗೆ ಯಾವ ಉತ್ತೇಜನವೂ ದೊರೆಯುವುದಿಲ್ಲ. ಡಿ.ವೈ.ಎಫ್.ಐ.ನ ಕ್ರೀಡೋತ್ಸವ ಈ ನಿಟ್ಟಿನಲ್ಲಿ [illegible] ಡಿ.ವೈ.ಎಫ್.ಐ. ಈ ಕ್ರೀಡೋತ್ಸವ ಸಂಘಟಿಸುವಲ್ಲಿ ಸಾಧಿಸಿದ ಯಶಸ್ಸಿನಿಂದ ಕ್ರೀಡಾ ವಿಭಾಗದ ಸರ್ಕಾರೀ ಅಧಿಕಾರಿಗಳು ಆಶ್ಚರ್ಯಚಕಿತರಾಗಿದ್ದಾರೆ.

KRNW/BGS-312 MAG(2) PRB DECR 319-78/79

ಕಾಂಗ್ರೆಸ್(ಐ) ಅಸಮರ್ಥತೆ

ಪುಟ 1ರಿಂದ

ಸರ್ಕಾರಕ್ಕಿದೆಯೋ ಅಥವಾ ಅದನ್ನು ಸಂಕುಚಿತ ಹಿತಾಸಕ್ತಿಗಳಿಗಾಗಿ ಬಳಸುವ ಹಳೆಯ ತಪ್ಪು ದಾರಿಯನ್ನೇ ಹಿಡಿಯುತ್ತದೆಯೋ ಎಂಬುದೇ ಈಗಿರುವ ಪ್ರಶ್ನೆ ಎಂದು ಪಾಲಿಟ್‌ಬ್ಯೂರೋ ಹೇಳಿಕೆ. ಈ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಮಾರ್ಚ್ 29ರಂದು ಪಂಜಾಬ್ ಸಮಸ್ಯೆಯತ್ತ ಗಮನ ಸೆಳೆಯಲು ಧರಣಿ ಸಂಘಟಿಸಬೇಕೆಂಬ ನಾಲ್ಕು ಎಡ ಪಕ್ಷಗಳ ನಿರ್ಧಾರವನ್ನು ಪಾಲಿಟ್‌ಬ್ಯೂರೋ ಸ್ವಾಗತಿಸಿ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ಇದನ್ನು ಬೆಂಬಲಿಸಬೇಕೆಂದು ಕರೆ ನೀಡಿದೆ.

ಬೋಡೋ ಚಳುವಳಿ

ಅಸ್ಸಾಮಿನಲ್ಲಿ ಬೋಡೋ ಚಳುವಳಿ ಮತ್ತು ಅದನ್ನು ಎ.ಜಿ.ಪಿ. ಸರ್ಕಾರ ಎದುರಿಸಿದ ವೈಖರಿಯಿಂದ ವ್ಯಾಪಕ ಹಿಂಸಾಚಾರ ನಡೆದಿರುವುದನ್ನು ಪರಿಶೀಲಿಸಿದ ಪಾಲಿಟ್‌ಬ್ಯೂರೋ ಈ ಬಗ್ಗೆ ಪಕ್ಷದ ಅಸ್ಸಾಂ ರಾಜ್ಯ ಸಮಿತಿ ನೀಡಿದ ಹೇಳಿಕೆಯನ್ನು ಅನುಮೋದಿಸಿದೆ. ಪ್ರತ್ಯೇಕ ಬೋಡೋ ರಾಜ್ಯದ ಕರೆಗೆ ಸಿ.ಪಿ.ಐ.(ಎಂ) ವಿರೋಧವಿದ್ದರೂ ಬೋಡೋ ಜನರು ಬುಡಕಟ್ಟು ಅಲ್ಪಸಂಖ್ಯಾತರೆಂಬ ಸಂಗತಿಯನ್ನು ರಾಜಕೀಯವಾಗಿ ಮಾನ್ಯ ಮಾಡಬೇಕು. ಈ ಬಗ್ಗೆ ಅವರ ಹಕ್ಕನ್ನು ಮಾನ್ಯತೆ ನೀಡಬೇಕು. ದೇಶದ ಇತರ ದೇಸೀ ಜನಾಂಗಗಳೊಂದಿಗೆ ಬುಡಕಟ್ಟು ಕೋಮುಗಳು ಕೂಡಾ ಆಡಳಿತದಲ್ಲಿ ಪಾಲು ಪಡೆಯುವಂತಾಗಲು ಪ್ರಾದೇಶಿಕ ಅಥವಾ ಸ್ಥಳೀಯ ಸ್ವಾಯತ್ತತೆ ನೀಡಬೇಕೆಂದು ಸಿ.ಪಿ.ಐ.(ಎಂ) ಸದಾ ಹೇಳುತ್ತಾ ಬಂದಿದೆ.

ಇದೇ ನೀತಿಯನ್ನು ಬೋಡೋ ಪ್ರಶ್ನೆಗೂ ಎ.ಜಿ.ಪಿ. ಸರ್ಕಾರ ಮತ್ತು ಕೇಂದ್ರ ಸರ್ಕಾರ ಅನ್ವಯಿಸುತ್ತದೆ. ಅದೇ ರೀತಿ ಅತ್ತ ಬೋಡೋ ಚಳುವಳಿ ಸಂಘಟಿಸಿದವರು ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು ಕೈಲಾದ ಎಲ್ಲಾ ಪ್ರಯತ್ನ ನಡೆಸುತ್ತಾರೆಂದು ಪಾಲಿಟ್‌ಬ್ಯೂರೋ ಆಶಿಸಿದೆ.

ಕೋಮುಗಳ ಕುಮ್ಮಕ್ಕು

ದೇಶಾದ್ಯಂತ ಹಳ್ಳಿಗಳಿಂದ ಇಟ್ಟಿಗೆಗಳನ್ನು ತಂದು ನವೆಂಬರ್ 2ರಂದು ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಲು ಆರಂಭಿಸಬೇಕೆಂದು ವಿಶ್ವ ಹಿಂದೂ ಪರಿಷತ್ ಆರ್.ಎಸ್.ಎಸ್.ನ ಬೆಂಬಲದೊಂದಿಗೆ ನೀಡಿರುವ ಕರೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿರುವ ಪಾಲಿಟ್‌ಬ್ಯೂರೋ ಈ ಸೂಕ್ಷ್ಮ ವಿಷಯದ ಮೇಲೆ ಘರ್ಷಣೆ ಬೆಳೆಸುವ ಪ್ರಯತ್ನವನ್ನು ಖಂಡಿಸಿದೆ. ರಾಮಜನ್ಮಭೂಮಿ/ಬಾಬ್ರಿ ಮಸೀದಿ ವಿವಾದವನ್ನು ಪೂರ್ಣವಾಗಿ ತ್ವರಿತ ನ್ಯಾಯ ತೀರ್ಪಿಗೆ ಒಪ್ಪಿಸಿ ಶಾಂತಿಯುತ ಇತ್ಯರ್ಥಕ್ಕೆ ಪ್ರಯತ್ನಿಸಬೇಕೆಂಬ ಸಿ.ಪಿ.ಐ.(ಎಂ) ನಿಲುವನ್ನು ಪಾಲಿಟ್‌ಬ್ಯೂರೋ ಹೇಳಿಕೆ ಪುನರುಚ್ಚರಿಸಿದೆ.

ರಾಜ್ಯಪಾಲರ ಪಾತ್ರ

ರಾಜ್ಯಪಾಲರನ್ನು ಚುನಾಯಿತ ರಾಜ್ಯ ಸರ್ಕಾರಗಳ ವಿರುದ್ಧ ಬಳಸುವ ಸರ್ವಾಧಿಕಾರೀ ಆಚರಣೆಯನ್ನು ಕೇಂದ್ರ ಸರ್ಕಾರ ಮುಂದುವರಿಸಿದೆಯೆಂದಿರುವ ಪಾಲಿಟ್‌ಬ್ಯೂರೋ ಪಶ್ಚಿಮಬಂಗಾಳ ಮತ್ತಿತರ ರಾಜ್ಯಗಳ ರಾಜ್ಯಪಾಲರುಗಳನ್ನು ಮುಖ್ಯಮಂತ್ರಿಗಳೊಡನೆ ಸಮಾಲೋಚಿಸದೆ ವರ್ಗ ಮಾಡಿರುವುದು ಪ್ರಜಾಪ್ರಭುತ್ವ-ವಿರೋಧಿ ನಿಲುವನ್ನು ತೋರಿಸುತ್ತದೆಯೆಂದಿದೆ. ಕರ್ನಾಟಕದಲ್ಲಿ ಕಾಂಗ್ರೆಸ್(ಐ) ಜನತಾದಳ ಸರ್ಕಾರಕ್ಕೆ ಮಾನ್ಯತೆ ರದ್ದು ಮಾಡಿಸಲು ರಾಜ್ಯಪಾಲರ ಮೂಲಕ ಪ್ರಯತ್ನಿಸಿತು. ಇದಕ್ಕೆ ವ್ಯಾಪಕ ವಿರೋಧ ಬರಬಹುದೆಂದು ನಿರೀಕ್ಷಿಸಿದ ರಾಜ್ಯಪಾಲರು ಆ ವಿನಾಶಕಾರೀ ದಾರಿ ಹಿಡಿಯಲಿಲ್ಲ.

ಪಶ್ಚಿಮಬಂಗಾಳದಿಂದ ಒರಿಸ್ಸಾಕ್ಕೆ ವರ್ಗಾಯಿಸಲ್ಪಡುವ ಮೊದಲು ಪ್ರೊ|| ನೂರುಲ್ ಹಸನ್ ಪಶ್ಚಿಮಬಂಗಾಳ ಅಸೆಂಬ್ಲಿ ಅಧಿವೇಶನವನ್ನು ಉದ್ಘಾಟಿಸಲು ಬಂದಾಗ ಕಾಂಗ್ರೆಸ್(ಐ) ಎಂ.ಎಲ್.ಎ.ಗಳ ದುರ್ವರ್ತನೆ ತಾನೇ ನೇಮಿಸಿದ ವ್ಯಕ್ತಿಗಳ ಬಗ್ಗೆ ಆಳುವ ಪಕ್ಷದ ಎಷ್ಟು ನಿಕೃಷ್ಟವಾಗಿ ನಡೆದುಕೊಳ್ಳುತ್ತದೆ ಎಂಬುದನ್ನು ತೋರಿಸಿಕೊಡುತ್ತದೆ.

ಸಿ.ಪಿ.ಐ. ಮಹಾಧಿವೇಶನ

ಸಿ.ಪಿ.ಐ.ನ 14ನೇ ಮಹಾಧಿವೇಶನದ ಚರ್ಚೆ ಮತ್ತು ನಿರ್ಣಯಗಳಲ್ಲಿ ಎಡ ಐಕ್ಯತೆ ಮತ್ತು ರಾಜೀವ ಸರ್ಕಾರವನ್ನು ಅಧಿಕಾರದಿಂದ ಇಳಿಸಲು ಎಡ, ಜಾತ್ಯಾತೀತ ವಿರೋಧ ಪಕ್ಷಗಳ ನಡುವೆ ಅಗತ್ಯದ ಮೇಲೆ ಒತ್ತು ನೀಡಲಾಗಿದೆ ಎಂದು ಪಾಲಿಟ್‌ಬ್ಯೂರೋ ಗಮನಿಸಿತು. ರಾಜೀವ ಸರ್ಕಾರದ ವಿರುದ್ಧ ದೃಢ ನಿಲುವಿನೊಂದಿಗೇ ಛಿದ್ರಕಾರಿ ಮತ್ತು ಕೋಮುವಾದಿ ಶಕ್ತಿಗಳಿಂದ ಬೆದರಿಕೆಯ ಅಂಶವನ್ನು ಒತ್ತಿ ಹೇಳುತ್ತಾ ಈ ಶಕ್ತಿಗಳೊಂದಿಗೆ ಸಮಯಸಾಧಕ ಮಿತ್ರತ್ವದ ವಿರುದ್ಧ ಸಿ.ಪಿ.ಐ. ಮಹಾಧಿವೇಶನ ಎಚ್ಚರಿಸಿದೆ. ಆದರೆ ಅದೇ ವೇಳೆಗೆ ಕಾಂಗ್ರೆಸ್(ಐ) ಆಳ್ವಿಕೆಯ ವಿರುದ್ಧ ಎಡ ಮತ್ತು ಜಾತ್ಯಾತೀತ ಶಕ್ತಿಗಳ ವಿಶಾಲ ಐಕ್ಯತೆ ರೂಪಿಸುವ ಚೌಕಟ್ಟಿನಲ್ಲಿ ವಿರೋಧ ಪಕ್ಷಗಳ ಮಂತ್ರಿಮಂಡಲಗಳ ಬಗ್ಗೆ ಸಿ.ಪಿ.ಐ. ತನ್ನ ನಿಲುವನ್ನು ಸ್ಪಷ್ಟೀಕರಿಸಿಲ್ಲ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯಪಟ್ಟು ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಪ್ರಚಾರಕ್ಕೆ ತುಪ್ಪ ಸುರಿಯುವ ಅನಾರೋಗ್ಯಕರ ಆಚರಣೆ ಮುಂದುವರೆಯುವ ಸಂಭವವೇ ಹೆಚ್ಚು ಎಂದು ಶಂಕೆ ವ್ಯಕ್ತಪಡಿಸಿದೆ.

ತನ್ನ ಕಾರ್ಯಕ್ರಮದ ಮೇಲೆ ಚರ್ಚೆಗಳನ್ನು ಪೂರ್ಣಗೊಳಿಸಲು ಮತ್ತು ಸದ್ಯದ ವರ್ಗ ವಾಸ್ತವತೆಗಳ ಆಧಾರದಲ್ಲಿ ಬದಲಾವಣೆಗಳನ್ನು ಅಂಗೀಕರಿಸಲು ಸಿ.ಪಿ.ಐ. ಮಹಾಧಿವೇಶನಕ್ಕೆ ಸಾಧ್ಯವಾಗದಿರುವುದು ದುರದೃಷ್ಟಕರ ಎಂದು ಪಾಲಿಟ್‌ಬ್ಯೂರೋ ಹೇಳಿಕೆ ತಿಳಿಸುತ್ತದೆ. ಏಕೆಂದರೆ ವರ್ಗ ಶಕ್ತಿಗಳ ಬಗ್ಗೆ ಮೂಲಭೂತವಾಗಿ ಸರಿಯಾದ ತಿಳವಳಿಕೆಯಿಲ್ಲದೆ, ಯಾವುದೇ ಪಕ್ಷ ತನ್ನ ಸದ್ಯದ ಚಟುವಟಿಕೆಗಳನ್ನು ತನ್ನ ದೂರಗಾಮಿ ಗುರಿಗೆ ಅನುಗುಣವಾಗಿ ನಡೆಸಲು ಸಾಧ್ಯವಾಗುವುದಿಲ್ಲ. ಕಾರ್ಯಕ್ರಮದ ಮೇಲಿನ ಚರ್ಚೆಯನ್ನು ನೋಡಿದರೆ ಬಹಳ ಸದಸ್ಯರು ಬದಲಾವಣೆಯ ಅಗತ್ಯ ಮನಗಂಡಂತೆ ಕಾಣುತ್ತದೆ.

ಬಹುತಃ ಸದ್ಯದ ಸನ್ನಿವೇಶದಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ. ಮತ್ತು ಇತರ ಎಡ ಪಕ್ಷಗಳೊಂದಿಗೆ ಕಾರ್ಯಾಚರಣೆಯಲ್ಲಿ ಐಕ್ಯತೆಯ ಮಹತ್ವವೇನು ಎಂದು ಈಗ ಅರಿವಾಗಿಯವಂತೆ ಕಾಣುತ್ತದೆ ಎಂದಿದೆ ಪಾಲಿಟ್‌ಬ್ಯೂರೋ ಹೇಳಿಕೆ.

ಆಫ್ಘಾನ್ ಪರಿಸ್ಥಿತಿ

ಆಫ್‌ಘಾನಿಸ್ತಾನದಲ್ಲಿ ಅಮೆರಿಕಾ ಮತ್ತು ಪಾಕಿಸ್ತಾನ ಜಿನೇವಾ ಒಪ್ಪಂದ ಉಲ್ಲಂಘನೆ ಮಾಡಿ, ಪಾಕಿಸ್ತಾನ ನೇರವಾಗಿ ಹಸ್ತಕ್ಷೇಪ ಮಾಡಿ ರಕ್ತಪಾತ ಮುಂದುವರಿಯುವಂತಾಗಿರುವುದರ ಬಗ್ಗೆ ಪಾಲಿಟ್‌ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ಆಫ್‌ಘಾನಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ, ಸಾಮ್ರಾಜ್ಯಶಾಹಿ ಮತ್ತು ಪಾಕಿಸ್ತಾನ ಬಹಿರಂಗ ಹಸ್ತಕ್ಷೇಪದ ವಿರುದ್ಧ ಅಂತರ್‌ರಾಷ್ಟ್ರೀಯ ಸಮುದಾಯ, ವಿಶ್ವಸಂಸ್ಥೆ ಹಾಗೂ ಅಲಿಪ್ತ ಆಂದೋಲನ ದನಿಯೆತ್ತಬೇಕೆಂದು ಅದು ಹೇಳಿದೆ.

ಪಶ್ಚಿಮಬಂಗಾಳ ವಿಧಾನಸಭೆ ಆಫ್‌ಘಾನ್ ಜನತೆಯೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ನಿರ್ಣಯ ಅಂಗೀಕರಿಸಿದೆ. ಇದು ತೃಪ್ತಿಯುಂಟು ಮಾಡುವಂತಹದು. ಅದೇ ರೀತಿ ಭಾರತದ ಸಂಸತ್ತು ಕೂಡಾ ನೇರ ನಿಲುವು ತಳೆಯಬೇಕೆಂದು, ಭಾರತದ ಎಲ್ಲಾ ಜನ ವಿಭಾಗಗಳೂ ಒಂದಾಗಿ ಆಫ್‌ಘಾನ್ ಜನತೆಯೊಂದಿಗೆ ಸೌಹಾರ್ದವನ್ನು ಬಲವಾಗಿ ವ್ಯಕ್ತಪಡಿಸಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಐದು ಮಧ್ಯ ಅಮೆರಿಕಾ ದೇಶಗಳ ನಡುವಿನ ಒಪ್ಪಂದವನ್ನು ಸ್ವಾಗತಿಸಿರುವ ಪಾಲಿಟ್‌ಬ್ಯೂರೋ ಈ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಈ ಒಪ್ಪಂದದ ಜ್ಯಾರಿಗೆ ವಿಶ್ವಸಂಸ್ಥೆ ಮತ್ತು ಅಲಿಪ್ತ ಆಂದೋಲನ ಬೆಂಬಲ ನೀಡಬೇಕೆಂದು ಹೇಳಿದೆ. ಈ ಶಾಂತಿ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಅಮೆರಿಕಾದ ಪ್ರಯತ್ನಗಳ ಬಗ್ಗೆ ಈ ದೇಶಗಳ ಜನತೆ ಜಾಗರೂಕರಾಗಿದ್ದುಕೊಂಡು ವಿಫಲಗೊಳಿಸುತ್ತಾರೆಂದು ಅದು ವಿಶ್ವಾಸ ವ್ಯಕ್ತಪಡಿಸಿದೆ.

ಸಹಾರಾವಿ ಜನತೆಯ ನ್ಯಾಯಬದ್ಧ ಆಕಾಂಕ್ಷೆಗಳ ಈಡೇರಿಕೆಗೆ ಮತ್ತು ಅಲ್ಲಿ ತಿಕ್ಕಾಟ ನಿಲ್ಲಿಸಲು ಪೋಲಿಸಾರಿಯೋ ರಂಗ ಮತ್ತು ಮೊರಾಕ್ಕೊ ದೊರೆಯ ನಡುವೆ ಆರಂಭವಾಗಿರುವ ಮಾತುಕತೆಗಳನ್ನು ಪಾಲಿಟ್‌ಬ್ಯೂರೋ ಸ್ವಾಗತಿಸಿದೆ.

ಕಾರ್ಮಿಕರ ಪ್ರತಿಭಟನೆ

ಪುಟ 1ರಿಂದ

ಅಧ್ಯಕ್ಷರಾದ ಕಾ|| ಎಸ್. ಸೂರ್ಯನಾರಾಯಣ ರಾವ್‌ರವರು ಜನವಿರೋಧಿ ಕಾಂಗ್ರೆಸ್(ಐ) ಸರ್ಕಾರವನ್ನು ಕಿತ್ತೊಗೆಯಲು ಕರೆ ನೀಡಿದರು. ರಾಜೀವ್ ಸರ್ಕಾರದ ಹೊಸ ಆರ್ಥಿಕ ನೀತಿ ಮತ್ತು ಜವಳಿ ನೀತಿಯ ಪರಿಣಾಮವಾಗಿ ಸುಮಾರು ಒಂದು ಲಕ್ಷ ಎಂಭತ್ತು ಸಾವಿರ ಕೈಗಾರಿಕಾ ಘಟಕಗಳು ರೋಗಗ್ರಸ್ಥವಾಗಿ ಮುಚ್ಚಲ್ಪಟ್ಟಿದ್ದು ಲಕ್ಷಾಂತರ ಕಾರ್ಮಿಕರ ಕುಟುಂಬಗಳು ಬೀದಿಪಾಲಾಗಿವೆ. ಬೆಂಗಳೂರು ನಗರದಲ್ಲೂ ಹಾಗೂ ರಾಜ್ಯದ ಇತರೆಡೆಗಳಲ್ಲಿ ಸಹ ಸುಮಾರು 5-6 ಸಾವಿರ ಸಣ್ಣಪುಟ್ಟ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದು 50 ಸಹಸ್ರಕ್ಕೂ ಹೆಚ್ಚು ಕಾರ್ಮಿಕರು ಕೆಲಸವನ್ನು ಕಳೆದುಕೊಂಡಿರುತ್ತಾರೆ ಎಂದು ಹೇಳಿದರು.

ಸಿ.ಐ.ಟಿ.ಯು. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾ|| ವಿ.ಜೆ.ಕೆ. ನಾಯರ್‌ರವರು ಜನತಾದಳ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಟೀಕಿಸುತ್ತಾ ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕುವ ಪ್ರವೃತ್ತಿ ಹಾಗೂ ಪೊಲೀಸರ ಅನಗತ್ಯ ಹಸ್ತಕ್ಷೇಪವನ್ನು ಖಂಡಿಸಿದರು. ನಮ್ಮ ದೇಶದಲ್ಲಿ ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಿರುವುದಿಲ್ಲ ಬದಲಾಗಿ ಆಸ್ತಿ ಹಕ್ಕನ್ನು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಸೇರಿಸಲಾಗಿದೆ ಎಂದು ಟೀಕಿಸಿದರು. ಜಿಲ್ಲಾ ಉಪಾಧ್ಯಕ್ಷರಾದ ಕಾ|| ಟಿ.ಎಸ್.ಅನಂತರಾಮ್‌ರವರು ಮಾತನಾಡಿ ಬೆಂಗಳೂರಿನಲ್ಲಿ ಬಿನ್ನಿಮಿಲ್, ಸೂರಿ ಅಂಡ್ ನಾಯರ್, ಶಿವಮೊಣಿ ಸ್ಟೀಲ್ ಟ್ಯೂಬ್ಸ್, ಭಾರತ್ ಮಾತಾ ವಾಚ್ ಫ್ಯಾಕ್ಟರಿ, ಅಲಂಬಿಕ್ ಗ್ಲಾಸ್, ಸೂರ್ಯೋದಯ ಮಿಲ್, ಆರ್.ಜಿ.ಮೆಟಲ್, ಇಂಡಿಯನ್ ಕೋಚ್ ಬಿಲ್ಡರ್ಸ್ ಮತ್ತು ಜೈರಾಮ್‌ದಾಸ್ ಉದ್ಯೋಗ್ ಇತ್ಯಾದಿ ಕಾರ್ಖಾನೆಗಳನ್ನು ಮುಚ್ಚಲಾಗಿದ್ದು ಕಾರ್ಮಿಕರು ತಮ್ಮ ಮೇಲಿನ ದಾಳಿಯನ್ನು ಎದುರಿಸಲು ಸಜ್ಜಾಗಬೇಕೆಂದು ಕರೆ ನೀಡಿದರು.

ಕಾರ್ಖಾನೆಗಳ ಮುಚ್ಚುವಿಕೆ, ಲಾಕೌಟ್, ಲೇ ಆಫ್ ಇತ್ಯಾದಿಗಳಿಂದಾಗಿ ಕಾರ್ಮಿಕರು ಎದುರಿಸುತ್ತಿರುವ ಬವಣೆಯ ಬಗ್ಗೆ ವಿಧಾನಸಭೆಯಲ್ಲಿ ನಿಲುವಳಿ ಸೂಚನೆಯೊಂದನ್ನು ಮಂಡಿಸಲು ತಕ್ಷಣ ಅವಕಾಶ ನೀಡದಿರುವುದನ್ನು ಪ್ರತಿಭಟಿಸಿ ಹೊರಬಂದ ಸಿ.ಪಿ.ಐ.(ಎಂ) ಶಾಸಕರಾದ ಕಾ|| ಆರ್.ವೆಂಕಟರಾಮಯ್ಯ ಹಾಗೂ ಕಾ|| ಟಿ.ಎಸ್.ಮಣಿಯವರು ಕಾರ್ಮಿಕರೊಡನೆ ಸೇರಿಕೊಂಡು ತಾವು ಸಹ ಬಂಧನಕ್ಕೊಳಗಾದರು. ಇದಕ್ಕೆ ಮುಂಚೆ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಇಬ್ಬರೂ ಶಾಸಕರು ಕಾರ್ಮಿಕರ ಹಾಗೂ ಜನತೆಯ ಹೋರಾಟಗಳನ್ನು ಸದನದೊಳಗೆ ಪ್ರತಿಭಟಿಸುವುದರೊಂದಿಗೆ ಹೋರಾಟಗಳಲ್ಲಿ ನೇರವಾಗಿ ಪಾಲ್ಗೊಳ್ಳುವುದಾಗಿ ಭರವಸೆ ನೀಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನಕಾರ್ಯದರ್ಶಿ ಕಾ|| ಚಂದ್ರಶೇಖರಬಾಳೆಯವರು ಕಾರ್ಮಿಕ ಹೋರಾಟಕ್ಕೆ ಸೌಹಾರ್ದ ಬೆಂಬಲ ಸೂಚಿಸುತ್ತಾ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಗ್ರಾಮೀಣ ಪ್ರದೇಶದ ರೈತಾಪಿ ಜನತೆಯನ್ನು ಅಣಿನೆರೆಸಲು ನೆರವು ಕೋರಿದರು. ಮಹಿಳೆಯರೂ ಸೇರಿದಂತೆ ಸುಮಾರು 800 ಮಂದಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಯುವಜನರ ಸ್ವರಗಳು

ಪುಟ 1ರಿಂದ

ದ್ದಾರೆ. ಇದನ್ನು ಭೇದಿಸಿ ಅವರನ್ನು ಬಯಲುಗೊಳಿಸುವ ಕೆಲಸವನ್ನು ನಾವು ಮಾಡಬೇಕಾಗಿದೆ ಎಂದು ಅವರು ಕರೆ ನೀಡಿದರು.

ಇದು ಸಮಾಜವಾದವೇ?

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಸೂರ್ಯನಾರಾಯಣರಾವ್‌ರವರು ತೀಕ್ಷ್ಣವಾಗಿ ಮಾತನಾಡಿ ಬಡವರು ಇನ್ನಷ್ಟು ಬಡವರಾಗುತ್ತಾ- ಶ್ರೀಮಂತರು ಇನ್ನಷ್ಟು ಕೊಬ್ಬುತ್ತಿರುವಾಗ-ನಿರುದ್ಯೋಗ, ಅನರಕ್ಷತೆ ವೃದ್ಧಿಸುತ್ತಿರುವಾಗ ರಾಜೀವ್ ಸರ್ಕಾರ ಸಮಾಜವಾದ ಘೋಷಣೆಯನ್ನು ಕೊಡುತ್ತದೆ. ಜನ ಇದರ ಹಿಂದಿನ ಮೋಸ ಅರಿಯಬೇಕು. ವ್ಯಕ್ತಿಗಳಿಂದ ಬದಲಾವಣೆ ಸಾಧ್ಯವಿಲ್ಲ. ಪ್ರಬಲವಾದ ಪ್ರಜಾಸತ್ತಾತ್ಮಕ ಚಳುವಳಿ ರೂಪಿಸುವುದೊಂದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿರುವ ಮಾರ್ಗ ಎಂದರು.

ನೆಹರೂ ಶತಮಾನೋತ್ಸವದ ಬಗ್ಗೆ ಭಾರೀ ಪ್ರಚಾರ ನಡೆಸುತ್ತಿರುವ ಕೇಂದ್ರ ಸರ್ಕಾರದ ಬಗ್ಗೆ ವ್ಯಂಗ್ಯ ಮಾಡಿದ ಸೂರಿಯವರು "ನೆಹರು ಮುಚ್ಚಿದ ಮಿಲ್ಲುಗಳನ್ನು ರಾಷ್ಟ್ರೀಕರಿಸಲು ಪ್ರಯತ್ನಿಸಿದರೆ, ರಾಜೀವ್‌ಗಾಂಧಿಯವರು ರಾಷ್ಟ್ರೀಕೃತ ಮಿಲ್ಲುಗಳನ್ನು ಮುಚ್ಚುತ್ತಿದ್ದಾರೆ..." ಎಂದು ಟೀಕಿಸಿದರು.

ಜನರಿಂದ ದೂರವೇಕೆ?

ಸಭೆಯಲ್ಲಿ ಮಾತಾಡಿದ ಸಿ.ಪಿ.ಐ.(ಎಂ) ಶಾಸಕರಾದ ಆರ್.ವೆಂಕಟರಾಮಯ್ಯನವರು ಜನರ ಪ್ರತಿನಿಧಿಗಳ ವಿಧಾನಸೌಧ ಜನರ ಪ್ರಶ್ನೆಗಳಿಗೆ ಸ್ಪಂದಿಸದಿರುವ ಬಗ್ಗೆ ಆತಂಕವ್ಯಕ್ತಪಡಿಸಿ- ಮುಖ್ಯಮಂತ್ರಿಗಳಿಗೆ ಯುವಕರ ಪ್ರಶ್ನೆಗಳಿಗೆ ಉತ್ತರ ಕೊಡಲೇ ಪುರುಸೊತ್ತಾಗುತ್ತಿಲ್ಲ. ಬಕಾಸುರನ ಪಾರ್ಟಿಯನ್ನು ಸೋಲಿಸಿ-ರಾವಣ ರಾಜ್ಯದಲ್ಲಿ ವಾಸಿಸುತ್ತಿರುವಂತೆ ರಾಜ್ಯದಲ್ಲಿ ಬೀಸಲಾಗುತ್ತಿದೆ ಎಂದು ದುಃಖವ್ಯಕ್ತಪಡಿಸಿ ರಾಜ್ಯ ಸರ್ಕಾರ ಯುವಜನರ ಪ್ರಶ್ನೆಗಳ ಬಗೆ ಉಡಾಫೆ ಮಾಡಬಾರದೆಂದು ಎಚ್ಚರಿಸಿದರು.

ರಾಜ್ಯ ಘಟಕದ ಅಧ್ಯಕ್ಷರಾದ ಕಾ|| ಎಚ್.ಎನ್.ನಾಗಮೋಹನ್‌ದಾಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಸ್.ಶಿವರಾಂ ಸ್ವಾಗತಿಸಿದರು.

ಚಿಣ್ಣರಿಂದ ಹೂಸಿಂಚರ

ರ್‍ಯಾಲಿಯನ್ನು ಬೆಂಗಳೂರಿನ ಪಂಥರ ಪಾಳ್ಯ ಘಟಕದ ರಾತ್ರಿ ಪಾಠ ಶಾಲೆಯ ಪುಟಾಣಿ ಮಕ್ಕಳು ಹೂಸಿಂಚರಿಸಿ ಸ್ವಾಗತಿಸಿದರು. ನಾಳಿನ ಪ್ರಜೆಗಳಾದ ಇವರ ಉದ್ಯೋಗದ ಬಗ್ಗೆ ರಾಜ್ಯ ಸರ್ಕಾರ ಖಾತರಿಪಡಿಸಬಲ್ಲದೆ...? ಎಂಬ ಪ್ರಶ್ನೆ ಅವರ ಮುಖಗಳಲ್ಲಿ ಉತ್ತರಕ್ಕೆ ಕಾದಿದ್ದವು.

ಈ ವಾರ....

ಎಂ.ಕಲ್ಬುರ್ಗಿಯವರ ವಿರುದ್ಧ ಎತ್ತಿರುವ ವಾದಗಳನ್ನು ಸಂಶೋಧನೆಗಳ ಮೂಲಕವೇ ಅಲ್ಲಗಳೆಯಲಿ ಆದರೆ ಈ ರೀತಿಯ ಗಲಭೆಗಳಿಂದಲ್ಲ.

-ಬಂಡಾಯ ಸಾಹಿತ್ಯ ಸಂಘಟನೆ ಹೇಳಿಕೆ
ಎಂ.ಎಂ.ಕಲ್ಬುರ್ಗಿಯವರ ಸಂಶೋಧನೆ
ಕುರಿತು ಎದ್ದಿರುವ ವಿವಾದದ ಬಗ್ಗೆ

ಈ ಸ್ಥಳೀಯ ವಿವಾದವನ್ನು ವಿಚಾರ ವಿನಿಮಯದಿಂದ ಬಗೆಹರಿಸಿಕೊಳ್ಳಲು ಸಾಧ್ಯವಿತ್ತು. ಆದರೆ ಕೆಲವು ಆಸಕ್ತ ವ್ಯಕ್ತಿಗಳು ಇದನ್ನು ಎಳೆದಾಡಿದ್ದಾರೆ. ಪರಿಣಾಮ ಹಿಂಸೆಯಲ್ಲಿ ಕೊನೆಗೊಂಡಿದೆ.

-'ಕನ್ನಡಪ್ರಭ' ಸಂಪಾದಕೀಯ
ಸಾವಳಗಿ ಗೋಲೀಬಾರ್ ಕುರಿತು.

ದೇಶ ಒಡೆದು ಛಿದ್ರಛಿದ್ರವಾಗುತ್ತಿರುವುದು ತಮ್ಮಿಂದಲೇ ಎಂಬ ಅರಿವು ಡೊಂಕು ಬಾಲದ ನಾಯಕರಿಗಿಲ್ಲ. ಪಂಜಾಬ್ ಸಮಸ್ಯೆ ಮತ್ತೂ ಗಾಢವಾಗಿ ಗಡಸಾಗಿ ಬೆಳೆಯುತ್ತಿದೆ. ಇದೀಗ ಬೋಡೋ ಸಮಸ್ಯೆ, ಮಹಾರಾಷ್ಟ್ರದಲ್ಲಿ ಪ್ರತ್ಯೇಕ ರಾಜ್ಯ ಚಳವಳಿ

-'ತರಂಗ' ಸಂಪಾದಕೀಯ

ಕಾಂಗ್ರೆ ಕೇಂದ್ರದಲ್ಲಿರುವವರೆಗೂ ಪಂಜಾಬ್ ಸಮಸ್ಯೆಗೆ ಪರಿಹಾರವಿಲ್ಲ

-ಅಮರೀಂದ್ರ ಸಿಂಗ್, ಸಂಡೇ ಅಬ್ಸರ್ವರ್

ಅಮೆರಿಕಾ ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನದಲ್ಲಿ ಮುಂದುವರೆಯಬಹುದು. ಆದರೆ ಮಾನವ ಸಂಬಂಧಗಳಲ್ಲಿ ಅದು ಇನ್ನಿಲ್ಲದಂತೆ ಹಿಂದೆ ಬಿದ್ದಿದೆ.

-ಅರುಣ್‌ಗಾಂಧಿ
ನ್ಯೂಸ್‌ವೀಕ್

ರಾಜೀವ್‌ಗಾಂಧಿ ಒಬ್ಬ ಕಿರು ತೆರೆಯ ತಾರೆ

-ದೇವೀಲಾಲ್

ನಮ್ಮಲ್ಲಿ (ಹೆಂಗಸರಲ್ಲಿ) ಅನೇಕರಿಗೆ ನಮ್ಮ ಮನೆಗಳಿಗಿಂತ ಬೀದಿಯೇ ಹೆಚ್ಚು ಕ್ಷೇಮಕರ.

-ಮಹಿಳೆಯ ಸ್ಥಿತಿ ಬಗ್ಗೆ
ಒಂದು ಅಂತರ್‌ರಾಷ್ಟ್ರೀಯ ಅಧ್ಯಯನದ ವರದಿ

Printed and published by P. RAMACHANDRA RAO on behalf of Communist Party of India (Marxist) Karnataka